# ಮಾನಸಿ

ತಿಂಗಳ ಪತ್ರಿಕೆ

ಜೂನ್ : 2000

☆ ಲಿಂಗಾಧಾರಿತ ಸೆನ್‌ಸಾರ್ ಎಂದರೇನು?

☆ ದಲಿತ ಮಹಿಳಾ ಲೋಕ

☆ ಜಾತ್ಯಾತೀತ ಇತಿಹಾಸದ ತಜ್ಞರ : ಮುಂದಿರುವ ಸವಾಲುಗಳು

# ಮಾನಸ

ತಿಂಗಳ ಪತ್ರಿಕೆ

ಸಂಪುಟ : 15 ಸಂಚಿಕೆ : 5
ಜೂನ್ : 2000



ವಿಳಾಸ
"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **3-00** ರೂ.
ವಾರ್ಷಿಕ ಚಂದಾ **40-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

## *ಈ ಸಂಚಿಕೆಯಲ್ಲಿ......*





ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

# ಸಂಪಾದಕೀಯ



**‘ಸೆನ್ಸಾರ್’** ಎಂದಾಕ್ಷಣ ನಮ್ಮ ಮನಸ್ಸು ‘ಪ್ರಭುತ್ವ’ದ ಬಗ್ಗೆ, ರಾಜ್ಯದ ಬಗ್ಗೆ ಬಲವಾಗಿ ಯೋಚಿಸತೊಡಗುತ್ತದೆ. ಮಹಿಳೆಯರ ವಿಚಾರದಲ್ಲಿ ಧರ್ಮ, ಲೈಂಗಿಕತೆ ಈ ಎರಡೂ ವಿಚಾರಗಳು ಪ್ರಬಲವಾದ ಹಿಡಿತವನ್ನೇ ಹೊಂದಿವೆ. ನಮ್ಮ ಸುತ್ತಮುತ್ತ ಬದುಕಿನಲ್ಲಿ, ದಿನನಿತ್ಯದ ಜೀವನದಲ್ಲಿ ‘ಸೆನ್ಸಾರ್‌ಶಿಪ್’ ಮೌಲ್ಯಗಳ ರೂಪದಲ್ಲಿ, ಕಾನೂನುಗಳ ಹಿಡಿತದಲ್ಲಿ, ಸಾಮಾಜಿಕ ನಡವಳಿಕೆಗಳಲ್ಲಿ ಪ್ರತಿಬಿಂಬಿಸುವುದನ್ನು ನಾವು ಕಾಣಬಹುದಾಗಿದೆ.

ಧರ್ಮದ ಬಗ್ಗೆ, ಧರ್ಮದ ಅರ್ಥದ ಬಗ್ಗೆ, ಧರ್ಮಗ್ರಂಥಗಳ ಬಗ್ಗೆ ನಾವು ಮಾತನಾಡಿದರೆ, ಬರೆದರೆ, ಮರುವಿಶ್ಲೇಷಣೆ ಮಾಡಿದರೆ ಹಿಂಸಾತ್ಮಕ ಪ್ರತಿಕ್ರಿಯೆಗಳು ಕಂಡುಬರುತ್ತವೆ. ಆಯಾ ಸಮುದಾಯಗಳು ಗುಲ್ಲೆಬ್ಬಿಸುತ್ತವೆ. ರಾಜ್ಯದ ಮೇಲೆ ಒತ್ತಡ ಹೇರುತ್ತವೆ. ರಾಜ್ಯ, ಪ್ರಭುತ್ವ ನಾನಾ ರೀತಿಯ ‘ಸೆನ್ಸಾರ್‌ಶಿಪ್’ಗೆ ಮಣಿಯುವಂತೆ ಮಾಡುತ್ತವೆ. ತಸ್ಲೀಮಾ ನಜರೀನ್‌ರ ಬದುಕು ಇಂದು ತಲ್ಲಣಗೊಂಡಿರುವುದೇ ಇಂತಹ ಸೆನ್ಸಾರ್‌ಶಿಪ್‌ನ ಹಿನ್ನೆಲೆಯಲ್ಲಿ, ‘ಚಂದ್ರಗಿರಿಯ ತೀರದಲ್ಲಿ’ ಬರೆದು ಪ್ರಕಟಿಸಿದಾಗ ಸಾರಾ ಅಬೂಬಕರ್ ಸಮುದಾಯದಿಂದ ಎದುರಿಸಿದ ಹಿಂಸಾತ್ಮಕ ಪ್ರತಿಭಟನೆ ಇದೇ ಬಗೆಯದ್ದಾಗಿದೆ.

ಲೈಂಗಿಕತೆಯ ಬಗ್ಗೆ ಮಾತನಾಡುವ ಮಹಿಳೆಯೂ ಸಹ ಕುಟುಂಬದಿಂದ, ಸಮಾಜದಿಂದ ಹಾಗೂ ಸುತ್ತ-ಮುತ್ತಲಿನವರಿಂದ ಇದೇ ಬಗೆಯ ಕಿರುಕುಳವನ್ನನುಭವಿಸುತ್ತಾಳೆ. ಆಕೆ ‘ಲೈಂಗಿಕ ಜೀವ’ಎಂಬುದನ್ನು ಒಪ್ಪಿಕೊಳ್ಳುವುದಕ್ಕೆ ಈ ಸಮಾಜಕ್ಕೆ ಕಷ್ಟ. ಆದರೆ ಆಕೆ ಲೈಂಗಿಕ ‘ವಸ್ತು’ವಾಗಬಹುದು. ಪ್ರತಿರೋಧಕವಾಗಿರುವಂತಹ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಸಂದರ್ಭದಲ್ಲಿ ಗುಮಾನಿಗೆ, ಹಿಂಸೆಗೆ, ಕಿರುಕುಳಕ್ಕೆ ಒಳಗಾಗುವ ಸಾಧ್ಯತೆಗಳಿರುವುದರಿಂದ ಮಹಿಳೆ ತನ್ನ ಮೇಲೆ ತಾನೇ ಸ್ವ-ನಿಯಂತ್ರಣವನ್ನು ಹೇರಿಕೊಂಡು ಬಿಡುತ್ತಾಳೆ. ಇವು ಹೊರಗಿನ ಒತ್ತಡಗಳ ಪರಿಣಾಮ ಎಂದು ನಮಗೆ ಮನವರಿಕೆಯಾಗುವಲ್ಲಿ, ನಮ್ಮೊಳಗೆ, ಇಳಿದು ನಮ್ಮ ಮನಸ್ಸಿನ ನಿಯಂತ್ರಣಗಳಾಗಿಬಿಟ್ಟಿರುತ್ತವೆ. ಈ ನಿಯಂತ್ರಣಗಳು ನಮ್ಮೊಳಗೇ ಬೇರು ಬಿಟ್ಟು ನಮ್ಮ ಬದುಕಿನ ಮೌಲ್ಯಗಳಾಗಿ ರೂಪುಗೊಂಡು ಬಿಡುತ್ತವೆ.

ಹೊರಗಿನ ನಿಯಂತ್ರಣ, ಒತ್ತಡಗಳನ್ನು ಮೀರಿ ಬರೆಯುವ, ಮಾತನಾಡುವ ಕ್ರಿಯೆಗೆ ಸವಾಲುಗಳಿರುವಂತೆ, ನಮ್ಮೊಳಗಿನದನ್ನು ಕಿತ್ತೆಸೆದು ಪರಿಶೀಸುವ,, ಅರ್ಥೈಸುವ ಕ್ರಿಯೆಗೂ ಸಾಕಷ್ಟು ಸವಾಲುಗಳಿವೆ. ಈ ಎರಡು ಬರೆಯುವ, ಕ್ರಿಯಾಶೀಲರಾಗುವ ಜವಾಬ್ದಾರಿ ನಮ್ಮೆಲ್ಲರ ಮುಂದಿದೆ.

○

# ಲಿಂಗಾಧಾರಿತ ಸೆನ್ಸಾರ್ ಎಂದರೇನು?

ಇಂಗ್ಲಿಷ್ ಮೂಲ : ಮೆರೆಡಿತ್ ಟ್ಯಾಕ್ಸ್
ಕನ್ನಡ ರೂಪ : ಮಮತಾ ಜಿ. ಸಾಗರ

ಜೈಲರ್ಗಳ ಮೂಲಕವೋ, ಕೊಲೆಗಡುಕರ ಮೂಲಕವೋ ಅಥವಾ ಅಧಿಕೃತ ಸೆನ್ಸಾರ್‌ನ ಮೂಲಕವೋ ಲೇಖಕರ ಬಾಯಿ ಮುಚ್ಚಿಸುವುದನ್ನು ಸಾಧಾರಣವಾಗಿ ಮಾನವ ಹಕ್ಕು ಸಂಸ್ಥೆಗಳು ಸೆನ್ಸಾರ್ ಎಂದು ಕರೆಯುವಂಥದ್ದು. ನಾವಿಲ್ಲಿ ಹೇಳುತ್ತಿರುವ ಸೆನ್ಸಾರು ಇನ್ನೂ ವಿಶಾಲವಾದ ಅರ್ಥವನ್ನೊಳಗೊಂಡಿದ್ದಾಗಿದೆ. ಪ್ರಚಾರದಲ್ಲಿರುವ ಆದರ್ಶದ ಚೌಕಟ್ಟಿನಿಂದ ಹೊರತಾದ ಯಾವುದೇ ಆಲೋಚನೆ ಅಥವಾ ಕಲಾಕೃತಿಯನ್ನು ಅದರ ಓದುಗರಿಗೆ ತಲುಪುವುದರಿಂದ ತಡೆಯುವಂಥ ಯಾವುದೇ ಸಾಧನವನ್ನು ನಾವಿಲ್ಲಿ ಸೆನ್ಸಾರ್ ಎಂದು ಕರೆಯುತ್ತಿದ್ದೇವೆ. ಚಾಲನೆಯಲ್ಲಿರುವ ವ್ಯವಸ್ಥೆಯನ್ನು ಕಾಪಾಡುವುದಕ್ಕಾಗಿ ಇಂಥಾ ಕೃತಿಗಳನ್ನು ವಶಪಡಿಸಿಕೊಳ್ಳುವುದು ಅಥವಾ ಬಹಿಷ್ಕರಿಸುವುದು ಅಥವಾ ಅವುಗಳನ್ನು ದುರ್ಲಕ್ಷಿಸುವುದು, ಅವುಗಳ ಮೇಲೆ ಕಳಂಕ ತರುವುದು, ನಾಶ ಮಾಡುವುದು, ಅಥವಾ ಉದ್ದೇಶ್ಯಪೂರ್ವಕವಾಗಿ ಇಂಥ ಕೃತಿಯನ್ನು ತಪ್ಪಾಗಿ ಅರ್ಥೈಸುವುದರ ಮೂಲಕ ಲೇಖಕರ ಬಾಯ್ಮುಚ್ಚಿಸುವುದನ್ನು ನಾವಿಲ್ಲಿ ಸೆನ್ಸಾರ್ ಎಂದು ಕರೆಯುತ್ತಿದ್ದೇವೆ.

ಸರ್ವೇ ಸಾಮಾನ್ಯವಾಗಿ ಕಂಡುಬರುವ ಸಾಂಸ್ಕೃತಿಕ ಸಂಘಟನೆಗಳ ಮೂಲಕ ಅಥವಾ ಅಧಿಕಾರದ ಮೂಲಕ ಪ್ರತಿಯೊಂದು ಸಮಾಜವೂ ಯಾವುದಾದರೊಂದು ಪ್ರಮಾಣದಲ್ಲಿ ಸೆನ್ಸಾರನ್ನು ಹೇರುತ್ತಿರುತ್ತದೆ. ಮಿಲಿಟರಿ ನಿರಂಕುಶ ಪ್ರಭುತ್ವವು, ಮಿಲಿಟರಿಯ ಮೂಲಕ ಇಂಥಾ ಒತ್ತಡವನ್ನು ತಂದರೆ, ಕಮ್ಯುನಿಸ್ಟ್ ದೇಶವು "ದುಡಿಯುವ ವರ್ಗದ ಸರ್ವಾಧಿಕಾರ"ದ; ಮೂಲಕ ಸೆನ್ಸಾರನ್ನು ಹೇರುತ್ತಿರುತ್ತದೆ. ಮಾರುಕಟ್ಟೆ ನಿಯಂತ್ರಿತ ಸಮಾಜದಲ್ಲಿ ಮಾರುಕಟ್ಟೆಯ ನಿಯಂತ್ರಣದ ಮೂಲಕ ಸೆನ್ಸಾರ್ ಕಂಡುಬರುತ್ತದೆ. ಕೆಲವೊಮ್ಮೆ ಇವು ಯಾವೂ ಸಾಲದಾದಾಗ ರಾಜಪ್ರಭುತ್ವದ ಮೂಲಕ ಸೆನ್ಸಾರ್ ಕಂಡುಬರುತ್ತದೆ.

ರಾಜಕೀಯ ವಿವಾದಗಳನ್ನು ಕುರಿತು ಬರೆಯುವ ಮಹಿಳೆಯರನ್ನು ನಿರ್ಧ್ವನಿತರನ್ನಾಗಿಸಲು ಬಳಸುವ ಸಾಧನಗಳು ಹೆಚ್ಚು ಕಡಿಮೆ ರಾಜ್ಯ ವಿರೋಧಿ ಪುರುಷರನ್ನು ಮೌನವಾಗಿಸಲು ಬಳಸುವ ಸಾಧನಗಳನ್ನೇ ಹೋಲುತ್ತದೆ. ಆದರೆ ಕಾರ್ಯಾಚರಣೆಗೆ ಬಂದಾಗ, ಅವು ಲಿಂಗಾಧಾರಿತವಾಗಿರುತ್ತದೆ. ನಮಗೆ ಕಾಣುವಂತೆ, ಲಿಂಗಾಧಾರಿತ ಸೆನ್ಸಾರು ಅಧಿಕೃತವಾದ ಸಂಘಟಿತ ನಿಗ್ರಹಣೆಗಿಂತ ಬೃಹತ್ತಾದ್ದು ಹಾಗೂ ಹೆಚ್ಚು ವ್ಯಾಪಕವಾದ್ದು, ಅದು ಮಹಿಳಾ ಧ್ವನಿಯನ್ನು ತಡೆಹಿಡಿವ ಹಲವಾರು ಸಾಂಸ್ಕೃತಿಕ ಮಾನದಂಡಗಳಲ್ಲಿ ಹಾಸುಹೊಕ್ಕಾಗಿ ಬೆರೆತಿದ್ದು ಅವರ ಅನುಭವಕ್ಕೆ ಮಾನ್ಯತೆ ನೀಡದೆ ಅವರನ್ನು ರಾಜಕೀಯ ಚರ್ಚೆಯಿಂದ ಹೊರತಾಗಿಸುತ್ತದೆ. ಪಿತೃಪ್ರಧಾನ ಲಿಂಗಾಧಾರಿತ ಸಂಬಂಧಗಳಲ್ಲಿ ಅಡಗಿದ ಅಸಮಾನತೆಯ ಮೇಲೆ ಮುಸುಕು ಹಾಕಿ, ಮಹಿಳೆಯರ ಜೀವನದ ವಸ್ತುಸ್ಥಿತಿಯನ್ನು ಅಲ್ಲಗಳೆಯುವುದು ಇದರ ಮೂಲ ಉದ್ದೇಶವಾಗಿರುತ್ತದೆ. ವ್ಯವಸ್ಥೆಯಲ್ಲಿ ತಮ್ಮ ಸ್ಥಾನವನ್ನೇ ಅರಿಯದ ಮುಗ್ಧ ಮಹಿಳೆಯರನ್ನು ಉದ್ದೇಶಿಸುವುದರ ಮೂಲಕ ಲಿಂಗಾಧಾರಿತ ಸೆನ್ಸಾರು ಉಳಿದವರನ್ನು ಬೆದರಿಸಿ ಲೇಖಕಿಯರ ಮೌಲ್ಯ ಒಡೆಯದ ಹಾಗೆ ತಡೆಯುತ್ತಿರುತ್ತದೆ.

ಮಹಿಳೆಯರನ್ನು ಮೌನವಾಗಿಸುವಲ್ಲಿ ಒಂದೆಡೆ ಸರ್ಕಾರೀ ಅಧಿಕಾರಿಗಳು ಹಾಗೂ ಮತಭ್ರಾಂತರು ಇದ್ದರೆ, ಮತ್ತೊಂದೆಡೆಯಲ್ಲಿ, ಹೆಣ್ಣುಮಗುವಿನ ವಿದ್ಯಾಭ್ಯಾಸದ ಖರ್ಚು ಯಾವುದೇ ಲಾಭವನ್ನು ತಾರದೆಂದು ನಿರ್ಧರಿಸುವ ತಂದೆ ತಾಯಿಯರು ಇರುತ್ತಾರೆ. ತಾಯ್ತನವನ್ನು ಮೀರಿದ ಆಸಕ್ತಿಗಳನ್ನು ಪ್ರೋತ್ಸಾಹಿಸದ ಅಧ್ಯಾಪಕರು, ಮಹಿಳೆಯರು ಬರೆದ ಪುಸ್ತಕಗಳು ಪ್ರಕಟಣೆಗೆ ಅರ್ಹವಲ್ಲವೆಂದು ಭಾವಿಸುವ ಪ್ರಕಾಶಕರು ಮತ್ತು ಮಹಿಳಾ ಬರಹವನ್ನು ಗಂಭೀರವಾಗಿ ಸ್ವೀಕರಿಸದ ವಿಮರ್ಶಕರು ಮಹಿಳೆಯರ ಮೌನಕ್ಕೆ ಕಾರಣರಾಗುತ್ತಾರೆ. ಸೆನ್ಸಾರು ಎಷ್ಟೋ ಸಾರಿ ಕುಟುಂಬದ ಒಳಗಿನಿಂದಲೇ ಕಂಡುಬರುವ ಸಾಧ್ಯತೆ ಇದೆ. ಲೇಖಕಿಯ ಬರಹದಿಂದ "ಸಂಸಾರದ ಗುಟ್ಟು ರಟ್ಟಾದೀತೆಂದು", ಗಂಡ, ತಂದೆ-ತಾಯಿಯರು ಅಥವಾ ಒಡಹುಟ್ಟಿದವರು ಹಸ್ತಪ್ರತಿಯ ನಾಶವನ್ನೋ, ನಿಗ್ರಹವನ್ನೋ ಮಾಡಬಹುದು. ಅಥವಾ ಅದರಲ್ಲಿ ಮಾರ್ಪಾಡು ಮಾಡಬಹುದು. ಮಗಳ ಅಥವಾ ಹೆಂಡತಿಯ ಸ್ವತಂತ್ರ ವ್ಯಕ್ತಿತ್ವವನ್ನು ಇಷ್ಟ ಪಡದ ತಂದೆ ಅಥವಾ ಗಂಡ, ಕೃತಿಯನ್ನು ತಮ್ಮ ಹೆಸರಿನಲ್ಲಿ ಪ್ರಕಟಿಸಿಕೊಳ್ಳುವ ಸಾಧ್ಯತೆಗಳಿವೆ. ಇಲ್ಲವೆ ಬೇರೆ ಯಾವುದೇ ರೀತಿಯಲ್ಲಿ ಅವರು

ಅದನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳಲೂಬಹುದು. ಏಕೆಂದರೆ ಮನೆಯ ಹೆಂಗಸರ ಉತ್ಪನ್ನವು ನಿಜವಾಗಿ ತಮಗೇ ಸೇರಿದ್ದು ಎಂದು ಅವರು ನಂಬಿರುತ್ತಾರೆ.

ರಾಜಕೀಯ ಗುಂಪುಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿರುವ ಮಹಿಳೆಯರು, ಗುಂಪಿನೊಳಗೆ ನಡೆಯುವ ಲೈಂಗಿಕ ಹಿಂಸೆ ಅಥವಾ ತಾರತಮ್ಯದ ಬಗ್ಗೆ ಉಸಿರೆತ್ತಿದರೆ ಲಿಂಗಾಧಾರಿತ ಸೆನ್ಸಾರನ್ನು ಎದುರಿಸಬೇಕಾಗುತ್ತದೆ. ಮಹಿಳೆಯರು ಸಂಪ್ರದಾಯ ಬದ್ಧ ಪಾತ್ರಗಳನ್ನು ನಿರ್ವಹಿಸಿದೇ ಲೇಖಕಿಯರು ಆದದ್ದಕ್ಕಾಗಿಯೋ ಅಥವಾ ಮನೆಯಿಂದ ಹೊರಗೆ ಕೆಲಸ ಮಾಡುತ್ತಿರುವುದಕ್ಕೋ ಬಲಪಂಥೀಯ ಚಳುವಳಿಗಳು ಮಹಿಳೆಯರನ್ನು ದೂಷಿಸುತ್ತವೆ. ಮಹಿಳೆಯರಿಗೆ ಸಂಬಂಧಿಸಿದ ವಿಚಾರಗಳ ಮೇಲೆ ಹೆಚ್ಚಿನ ಒತ್ತುಕೊಟ್ಟು, ಮಹಿಳಾ ದೌರ್ಜನ್ಯ ಆರ್ಥಿಕ ವಿವಾದಗಳ ಚೌಕಟ್ಟಿಗೆ ಮಾತ್ರ ಸೀಮಿತವಾದದ್ದಲ್ಲ ಎಂದು, ವಾದ ಮಾಡುವವರ ಮೇಲೆ ಎಡಪಂಥೀಯ ಚಳುವಳಿಗಳು ಹಾರಿ ಬೀಳುತ್ತವೆ. ತುಳಿತಕ್ಕೆ ಒಳಗಾದವರ ಚಳುವಳಿಯು, ಚಳುವಳಿಯ ಒಳಗಿನ ಲೈಂಗಿಕ ದುರಾಚಾರದ ಬಗ್ಗೆ ಧ್ವನಿ ಎತ್ತುವ ಮಹಿಳೆಯರನ್ನು ತಿದ್ದಿ, "ನಮ್ಮ ನಮ್ಮೊಳಗೇ" ಆಡಬೇಕಾದ ಮಾತನ್ನು ಬಹಿರಂಗ ಗೊಳಿಸಬಾರದು ಎಂದು, ಅವರ ತಿಳುವಳಿಕೆಯನ್ನು ಶುದ್ಧ ಪಡಿಸುತ್ತದೆ. ಇನ್ನು ಮಹಿಳಾ ಚಳುವಳಿಗಳು ತಮ್ಮ ಮಾದರಿಯ ಪ್ರಾಮಾಣಿಕತೆಯನ್ನು ಪ್ರಶ್ನಿಸುವವರನ್ನು ಸಹಿಸುವುದಿಲ್ಲ ಅಥವಾ ತಮ್ಮ ಅನಿಸಿಕೆಯ ಚೌಕಟ್ಟಿನಲ್ಲಿ ಬಾರದ ಮಹಿಳೆಯರನ್ನು ಕಟುವಾಗಿ ನಿಂದಿಸುತ್ತದೆ. ಕುಟುಂಬದ ಸದಸ್ಯರು ಅಥವಾ ತೀರ ಹತ್ತಿರದವರು ಒಡ್ಡುವ ಈ ರೀತಿಯ ಸೆನ್ಸಾರು ಎಷ್ಟೋ ಸಾರಿ ಸ್ವ-ತಡೆಗೆ (Self-censorship)ಗೆ ಕಾರಣವಾಗುತ್ತದೆ. ಸತ್ಯವನ್ನು ನುಡಿಯುವುದರಿಂದ ವಾಸ್ತವ ಸ್ಥಿತಿಯಲ್ಲಿ ಎದುರಿಸ ಬೇಕಾಗಬಹುದಾದ ತೊಡಕುಗಳನ್ನು ಎದುರಿಸಲಾರದೆ, ಎಷ್ಟೋ ಜನ ಹೇಳಬೇಕಾದ್ದನ್ನು ಒಳಗೇ ಹಿಡಿದಿಟ್ಟುಕೊಳ್ಳುವುದುಂಟು. ಇಂಥಾ ಮೌನ ಎಷ್ಟೋ ಸಾರಿ ಪ್ರೀತಿಯನ್ನು ಕಳೆದುಕೊಂಡು ದುಃಖಿಸುವುದರಲ್ಲೋ, ಜೈಲಿಗೆ ತಳ್ಳಲ್ಪಡುವುದರಲ್ಲೋ, ಗಡಿಪಾರು ಆಗುವುದರಲ್ಲೋ, ಅಥವಾ ಕೊಲೆಯಾಗುವುದರಲ್ಲೋ ಕೊನೆಗೊಳ್ಳುವ ಸಂಭಾವನೆಗಳು ಇರುತ್ತವೆ.

ವಿಶಾಲವಾಗಿ ಹರಡಿರುವ ಮಹಿಳಾ ಅನಕ್ಷರತೆಯನ್ನು ಆರ್ಥಿಕ ಹಾಗೂ ರಾಜಕೀಯ ಪ್ರಾಧಾನ್ಯತೆಗಳು ನಿರೂಪಿಸಿವೆ. ಇಲ್ಲೂ ಲಿಂಗಾಧಾರಿತ ಸೆನ್ಸಾರು ಹಾಸುಹೊಕ್ಕಾಗಿ ಬೆರೆತಿರು ವುದನ್ನು ಗಮನಿಸಬಹುದು. ಸ್ತ್ರೀ ವಿಶಿಷ್ಟ ಅನುಭವಗಳನ್ನು ಹೀನಾಯವಾಗಿ ನೋಡುವಂತೆ ಹಾಗೂ ಅಸಮರ್ಪಕವಾಗಿ ಕಾಣುವಂತೆ ರೂಪಿಸಲಾಗಿರುವ ವಿದ್ಯಾಭ್ಯಾಸದ ಮಾದರಿಯಲ್ಲೂ ಇದನ್ನೇ ಕಾಣಬಹುದು. ಇಂಥಾ ಭಯಂಕರವಾದ ಅನಕ್ಷರತೆಯಲ್ಲಿ ಸಾವಿರಾರು ಸೋದರಿಯರು ಮುಳುಗಿ ಹೋಗಿರುವುದಕ್ಕೆ ಕೇವಲ ಬಡತನ, ಕೆಲಸದ ಹೊರೆ ಅಥವಾ ಕುಟುಂಬದೊಳಗಿನ ಅಸಮಾನತೆ ಮಾತ್ರವೇ ಕಾರಣವಲ್ಲ. ಯಾವ ಸಾಮಾಜಿಕ ರೂಢಿ, ಮಹಿಳಾ ಜಡತೆ, ನಿಶ್ಚಲತೆಯನ್ನು ಖಾತ್ರಿ ಪಡಿಸಿಕೊಳ್ಳುತ್ತಾ, ಸಾಮೂಹಿಕವಾಗಿ ಧ್ವನಿಸಬಲ್ಲ ಶಕ್ತಿಯಿಂದ ಮಹಿಳೆಯರನ್ನು ವಂಚಿಸುವುದಕ್ಕಾಗಿ ರೂಪಿತವಾಗಿದೆಯೋ ಅದೇ ಇದಕ್ಕೆ ಮೂಲ ಕಾರಣ. ಮಹಿಳೆಯರನ್ನು ಕೀಳಾಗಿ ಕಾಣುವ ಹಾಗೂ ಅವರನ್ನು ಮೌನವಾಗಿಸುವ ನಿಟ್ಟಿನಿಂದ ಮಹಿಳಾ ಸಾಕ್ಷರತೆಯ ಖಂಡನೆ ಅಥವಾ ವಿರೋಧ ಹುಟ್ಟುತ್ತದೆ. ಇಂಥ ವಿರೋಧಗಳ ಉದ್ದೇಶ್ಯವು ಲೇಖಕಿಯರು ಎದುರಿಸುವ ಕೊಲೆ ಬೆದರಿಕೆಗಳಲ್ಲಿ ಸ್ಪಷ್ಟ ರೂಪವನ್ನು ಪಡೆದುಕೊಳ್ಳುತ್ತದೆ.

ಮುಖ್ಯವಾಗಿ ಯುದ್ಧದಲ್ಲಿ ತೊಡಗಿರುವ ಸಮಾಜಗಳಲ್ಲಿ ಅಥವಾ ಧಾರ್ಮಿಕ ಮೌಲ್ಯಾಧಾರಿತ ಮತ್ತು ವರ್ಗಾಧಾರಿತ ಸಮಾಜಗಳಲ್ಲಿ ಕೊಲೆ ಬೆದರಿಕೆಗಳ ಮೂಲಕ ಹೇರಲಾಗುವ ಸೆನ್ಸಾರು ಸರ್ವೇಸಾಧಾರಣ ಆಗಿಬಿಟ್ಟಿದೆ. ಮುಂಚಿನ ಯುಗೋಸ್ಲೋವಿಯಾ ದೇಶಗಳಿಗೆ ಸಂಬಂಧಿಸಿದಂತೆ ರೈಡ ಇವೆಕೊವಿಕ್ ಹೇಳುತ್ತಾರೆ. ''ಕೊಲೆ ಬೆದರಿಕೆಯನ್ನು ಹೆಚ್ಚು ಕಡಿಮೆ ಗಂಭೀರವಾಗೇ ಪರಿಗಣಿಸಲಾಗುತ್ತದೆ. ಹೀಗೆ ಬರುವ ಯಾವುದೇ ಕೊಲೆ ಬೆದರಿಕೆಯ, ಪರಿಣಾಮ, ಸೆನ್ಸಾರು. ಇದಕ್ಕೆ ಉಗ್ರವಾದಿಗಳು, ಸಜ್ಜಿತ ಪಡೆಗಳು (armed groups), ಅಥವಾ ಯಾವುದೇ ಜನಾಂಗಗಳ ಒತ್ತಾಯ ಕಾರಣವಾಗ ಬಹುದು. ಯುದ್ಧದ ಆಸುಪಾಸಿನ ಜಾಗಗಳಲ್ಲಿ ಈ ಬೆದರಿಕೆ ಕಾನೂನು ಬದ್ಧವೂ ಅಧಿಕೃತವೂ ಆಗಿರಲಿಕ್ಕೆ ಸಾಧ್ಯ''.

ಆಲ್ಜೀರಿಯಾದಲ್ಲಿ ಲಿಂಗಾಧಾರಿತ ಸೆನ್ಸಾರು ಮಹಿಳೆಯರ ವಿರುದ್ಧ ಹೂಡಿರುವ ಯುದ್ಧದ ರೂಪವನ್ನೇ ಪಡೆದಿದೆ. ಅಕ್ಷರಸ್ಥ 'ನೂತನ' ಮಹಿಳೆಯರು ಮತ್ತು ಮಹಿಳಾ ಪತ್ರಕರ್ತೆಯರ ಮಾನಭಂಗ ಮತ್ತು ಕೊಲೆ ಮಾಡುವುದರ ಮೂಲಕ ಇಸ್ಲಾಂ ಉಗ್ರವಾದಿಗಳು ಮಹಿಳೆಯರ ಮೇಲೆ ಹಲ್ಲೆ ನಡೆಸಿದ್ದಾರೆ. ಇದು ಉಗ್ರವಾದಿಗಳ ಧೋರಣೆಯಾದರೆ, ಸರ್ಕಾರಿ ಕೊಲೆಗಡುಕರ ಗುಂಪು ಇಸ್ಲಾಂ ಉಗ್ರವಾದಿಗಳ ಹೆಸರನ್ನು ಹಾಳು ಮಾಡುವುದಕ್ಕಾಗಿಯೋ, ಅಥವಾ ಸುಲಭದಲ್ಲೇ ಇಂಥಾ ಹೀನ ಕೃತ್ಯ ಸಾಧ್ಯವಾಗುತ್ತದೆಂದೋ ಏನೋ, ವೇಷ ಮರೆಸಿಕೊಂಡು, ಉಗ್ರವಾದಿಗಳ ಹೆಸರಿನಲ್ಲಿ ದೌರ್ಜನ್ಯವನ್ನು ನಡೆಸುತ್ತಿದೆ. ಇಲ್ಲಿ

ಸಣ್ಣ ಹುಡುಗಿಯರು ಶಾಲೆಗೆ ಹೋಗುತ್ತಿರುವುದಕ್ಕಾಗಿ ಕೊಲ್ಲಲ್ಪಡುತ್ತಿದ್ದಾರೆ. 1983ರ ಈಚೆಗೆ ಸುಮಾರು 200ಕ್ಕೂ ಹೆಚ್ಚು ಲೇಖಕಿಯರು ಮತ್ತು ಮಹಿಳಾ ಪತ್ರಿಕೋದ್ಯಮಿಗಳ ಕೊಲೆಯಾಗಿದೆ. ಐಚಾ ಲೆಂಸ್ಸೆನ್ ಹೇಳುವಂತೆ : ಅಲ್ಜೀರಿಯಾದ ಬರಹಗಾರ್ತಿಯರು ಜಂಟಿ ಬೆದರಿಕೆಯಲ್ಲಿ ಬದುಕುತ್ತಿದ್ದಾರೆ. ಒಂದು ಧಾರ್ಮಿಕ ಮೂಲಭೂತವಾದಿಗಳದ್ದಾದರೆ ಇನ್ನೊಂದು ಅರೆ-ಫ್ಯಾಸಿಸ್ಟ್ ಮಿಲಿಟರಿ ಆಡಳಿತದ್ದು. ಆರ್ಥಿಕ ಆಧಾರ ಏನೂ ಇಲ್ಲದ ನಮಗೆ ಮಹಿಳಾ ಹೋರಾಟವೆಂದರೆ ಬದುಕಿ ಉಳಿಯಬಲ್ಲ ಹೋರಾಟವಾಗಿಬಿಟ್ಟಿದೆ. ನಮ್ಮ ಮಾನಸಿಕ ಸಮತೋಲನವಂತೂ ಭಯ ಹಾಗೂ ವ್ಯಾಕುಲತೆಯಲ್ಲಿ ಕ್ಷೀಣಿಸಿ ಹೋಗುತ್ತಿದೆ......ನಮ್ಮನ್ನು ಸದ್ದಿಲ್ಲದಂತೆ ಅಡಗಿಸಲು ಆಡಳಿತ ಹಾಗೂ ಇಸ್ಲಾಮಿಗಳ ಬೆದರಿಕೆಯ ಕಾರಣವಷ್ಟೇ ಸಾಕು. ಭಯ ಅನ್ನುವುದು ನಮ್ಮನ್ನು ತರ್ಕಬದ್ಧ ಆಲೋಚನೆಯಿಂದ ಹಾಗೂ ಸೃಜನಾತ್ಮಕ ಬರವಣಿಗೆಯಿಂದ ದೂರವಿಡುತ್ತದೆ. ಈ ಮಾನಸಿಕ ಒತ್ತಡ ಹಾಗೂ ಗಡಿಪಾರುಗಳಿಂದಾಗಿ ಸೃಜನಾತ್ಮಕ ಬರವಣಿಗೆ ಅಸಾಧ್ಯವಾಗುತ್ತದೆ. ಅಥವಾ ಆರ್ಥಿಕ ಬಿಕ್ಕಟ್ಟು ನಮ್ಮನ್ನು ಸರ್ಕಾರದ ಒತ್ತಡಗಳಿಗೆ ಮಣಿಯುವಂತೆ ಮಾಡುತ್ತದೆ....... ಈ ಎಲ್ಲಾ ಕಾರಣಗಳಿಂದಾಗಿ ಅರಬ್ ಹಾಗೂ ಮುಸ್ಲಿಂ ಮಹಿಳೆಯರು ತಮ್ಮ ಜೀವನವನ್ನು ಕಾಪಾಡಿಕೊಳ್ಳುವುದರ ಜೊತೆಗೆ ಬರೆಯುವ ಹಾಗೂ ಸೃಜನಾತ್ಮಕವಾಗಿ ಸೃಷ್ಟಿಸುವ ಅವಕಾಶಗಳನ್ನು ಸಹ ಕಾಪಾಡಿಕೊಳ್ಳಬೇಕಾಗಿದೆ. ಇದಕ್ಕಾಗಿ ನಮಗೆ ಒಂದು ವೇದಿಕೆಯ ಅವಶ್ಯಕತೆ ಇದೆ. ಇಂಥಾ ಒಂದು ವೇದಿಕೆಯು ನಮಗೆ ಮುಕ್ತ ಮಾತುಕತೆ ಮತ್ತು ಪ್ರಕಟಣೆಗೆ ಅವಕಾಶ ಮಾಡಿಕೊಟ್ಟು ಸಮೂಹ ಮಾಧ್ಯಮದ ಮೂಲಕ ಅಂತರರಾಷ್ಟ್ರೀಯ ಎಕ್ಸ್‌ಪೋಶರ್ ದೊರಕಿಸಿಕೊಡುವುದಾದರೆ, ನಮ್ಮ ಧ್ವನಿಗೆ ತಾಕತ್ತು ಬೆಂಬಲ ಸಿಕ್ಕಂತಾಗುತ್ತದೆ.

ಅಲ್ಜೀರಿಯಾದಲ್ಲಿ ಮಹಿಳಾ ವಿದ್ಯಾಭ್ಯಾಸಕ್ಕೆ ಕೊಲೆಯ ಮೂಲಕ ತಡೆಯೊಡ್ಡಿದರೆ, ಇನ್ನೂ ಕೆಲವು ದೇಶಗಳಲ್ಲಿ ಹೆಣ್ಣುಮಕ್ಕಳ ಮೇಲೆ ಲೈಂಗಿಕ ಅತ್ಯಾಚಾರ ಮತ್ತು ಮಾನಭಂಗ ನಡೆಸಿ ಅವರ ವಿದ್ಯಾಭ್ಯಾಸಕ್ಕೆ ಅಡಚಣೆಯನ್ನು ಉಂಟು ಮಾಡಲಾಗುತ್ತಿದೆ. ಆರ್ಥಿಕ ಪ್ರಾಶಸ್ತ್ಯದಲ್ಲಿನ ತಾರತಮ್ಯವು ಮಹಿಳೆಯರನ್ನು ಅಗೌರವವಾಗಿ ಕಾಣಲು ಅವಕಾಶ ಮಾಡಿಕೊಡುತ್ತದೆ. ಇದನ್ನು ಮಹಿಳಾ ವಿದ್ಯಾಭ್ಯಾಸಕ್ಕೆ ಅಡಚಣೆಯ ಸಾಧನವನ್ನಾಗಿ ಬಳಸಿಕೊಳ್ಳಲಾಗುತ್ತದೆ. ಪೂರ್ವ ಯೂರೋಪಿನ ಹೊಸ ಮಾರುಕಟ್ಟೆಯ ಆಡಳಿತದಲ್ಲಿ ಹೆಣ್ಣುಮಕ್ಕಳ ಅನಕ್ಷರತೆ ದಿನೇ ದಿನೇ ಹೆಚ್ಚಾಗುತ್ತಿದೆ. ಬೋರ್ಡಿಂಗ್ ಶಾಲೆಗಳಲ್ಲಿಯ ಹುಡುಗಿಯರ ಮೇಲಿನ ಸಾಮೂಹಿಕ ಅತ್ಯಾಚಾರಗಳಿಗೆ ಶಿಕ್ಷೆಯೇ ಇಲ್ಲದೆ, ಆರಾಮಾಗಿ ಅತ್ಯಾಚಾರಕ್ಕೆಂದೇ ತೆರೆದಿಟ್ಟ ಬಯಲಾಗಿಬಿಟ್ಟಿದೆ ಕೆನ್ಯ. ಅಮೇರಿಕದ ವ್ಯವಸ್ಥೆಯು ಯುವಕರನ್ನು ಬೇಜವಾಬ್ದಾರಿಯಿಂದ ಕೈಬಿಟ್ಟಿರುವ ಒಂದು ನಿದರ್ಶನವೆಂದರೆ ನಗರದ ಒಳವಲಯ ಗಳಲ್ಲಿ, ನಿರ್ದಿಷ್ಟವಾಗಿ ಹಿಂದುಳಿದ ವರ್ಗಗಳು ಇರುವ ಕಡೆ ವಿದ್ಯಾಭ್ಯಾಸಕ್ಕೆ ನೀಡುತ್ತಿದ್ದ ಆರ್ಥಿಕ ಸಹಾಯವನ್ನು ಹಿಂದೆಗೆದು ಕೊಳ್ಳುತ್ತಿರುವುದು ಯುವಕರ ಲೈಂಗಿಕ ಆಸಕ್ತಿಗಳನ್ನು ಕೆರಳಿಸುವ ಸಮೂಹ ಮಾಧ್ಯಮದ ಪ್ರಭಾವಗಳ ಜೊತೆಗೆ ವ್ಯವಸ್ಥೆಯ ಈ ಅಸಡ್ಡೆಯೂ ಸೇರಿ ಶಾಲೆಗಳಲ್ಲಿ ಲೈಂಗಿಕ ಅತ್ಯಾಚಾರ ಅತಿರೇಕಕ್ಕೆ ಏರುತ್ತಿದೆ. ಎಷ್ಟೋ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸದ ಮುಂದುವರಿಕೆಯ ಬಗ್ಗೆಯೇ ನಂಬಿಕೆ ಕಡಿಮೆ ಆಗುತ್ತಿರುವಾಗ ಈ ಅತ್ಯಾಚಾರಕ್ಕೊಳಗಾಗಿ ಅವರು ಹದಿನಾಲ್ಕನೇ ವಯಸ್ಸಿಗೇ ಬಸಿರಾಗುತ್ತಿದ್ದಾರೆ.

ಶಿಕ್ಷಣವಿಲ್ಲದೇ ಮಹಿಳೆಯರಿಗೆ ಸಮಾಜದಲ್ಲಿ ಧ್ವನಿಯೇ ಇಲ್ಲ. ಆದಕಾರಣ, ಮಹಿಳಾ ಶಿಕ್ಷಣ ವ್ಯವಸ್ಥೆಯೊಳಗಿನ ಒತ್ತಡ ಮತ್ತು ತಾರತಮ್ಯಗಳು ಸೆನ್ಸಾರನ್ನು ಬಲಗೊಳಿಸುತ್ತದೆ. ನದೇದ ಅಗಿಕಿನರ ಪ್ರಕಾರ ರಷ್ಯಾದಲ್ಲಿನ ಶಿಕ್ಷಣ ವ್ಯವಸ್ಥೆಯ ಉದ್ದೇಶವೇ ಇದು :

ಹತ್ತು ಹದಿನೈದು ವರ್ಷಗಳ ಹಿಂದೆ ಶಾಲೆಯಲ್ಲಿ ಅಧ್ಯಾಪಕರು ತಮ್ಮ ವಿದ್ಯಾರ್ಥಿಗಳು ಉತ್ತಮ ಹೈಸ್ಕೂಲು ಹಾಗೂ ವಿಶ್ವವಿದ್ಯಾಲಯಗಳಿಗೆ ಹೋಗಬೇಕೆಂದು ಆಶಿಸುತ್ತಿದ್ದರು. ಆದರೆ ಈಗ ಈ ಉನ್ನತ ವಿದ್ಯಾಭ್ಯಾಸವನ್ನು ಅವರು ಕೇವಲ ಗಂಡು ಮಕ್ಕಳಿಗೆ ಮಾತ್ರ ಬಯಸುತ್ತಾರೆ. ಹೆಣ್ಣುಮಕ್ಕಳ ವಿಚಾರದಲ್ಲಿ "ಸ್ವಾಭಾವಿಕ ವಿಧಿನಿಯಮ"ದ ಮೇಲೆ ಹೆಚ್ಚಿನ ಒತ್ತು ಕೊಡುತ್ತಾರೆ. ಈ ಹೊಸ ಸಂಗತಿಗೆ ಚಾಲನೆ ಕೊಟ್ಟಿದ್ದರ ಅಪವಾದ ಸೇರಬೇಕಾದ್ದು ಮೈಖೆಲ್ ಗಾರ್ಬಚೇವ್‌ಗೆ. ತಮ್ಮ ಪ್ರಚಲಿತ ಪುಸ್ತಕ ಪೆರೆಸ್ಟ್ರೋಯ್ಕದಲ್ಲಿ "ಅಭಿವೃದ್ಧಿ ಮತ್ತು ಸ್ವಾತಂತ್ರ್ಯವನ್ನು ಅನುಭವಿಸಿ ಬೇಸತ್ತ" ಸೋವಿಯತ್ ಮಹಿಳೆಯರಿಗೆ "ಸ್ವಾಭಾವಿಕ ವಿಧಿನಿಯಮ" ಎಷ್ಟು ಮಹತ್ವವಾದ್ದು ಎಂದು ಗಾರ್ಬಚೇವ್ ಚರ್ಚಿಸಿದ್ದಾರೆ. ಸ್ಪಷ್ಟವಾಗಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಿರುವ ತಾರತಮ್ಯವೇ ಇದರ ಫಲವಾಗಿದೆ...... ರಷ್ಯಾದಲ್ಲಿ ಗೌರವಾನ್ವಿತ ವಿದ್ಯಾಲಯಗಳಾದ ಮಾಸ್ಕೋ ಸ್ಟೇಟ್ ಯೂನಿವರ್ಸಿಟಿಯ ಅಂತರರಾಷ್ಟ್ರೀಯ ಜರ್ನಲಿಸಂ ವಿಭಾಗ ಅಥವಾ ಫಾರಿನ್ ಅಫೇರ್ಸ್ ಇನ್‌ಸ್ಟಿಟ್ಯೂಟ್‌ಗಳಿಗೆ (ರಾಯಭಾರಿತನಕ್ಕೆ) ಅರ್ಜಿ ಸಲ್ಲಿಸಲು

ಪುರುಷರಿಗೆ ಮಾತ್ರ ಅರ್ಹತೆಯುಂಟು. ವಿಶ್ವವಿದ್ಯಾಲಗಳ ವಿಭಾಗಗಳಲ್ಲಿಯ ಅಧಿಕೃತ ಹುದ್ದೆಗಳನ್ನು (ಡೀನ್ ಮತ್ತು ಅಧ್ಯಕ್ಷ ಸ್ಥಾನಗಳು) ನೋಡಿದರೆ ಪುರುಷರೇ ಹೆಚ್ಚು ಸ್ಥಾನವನ್ನು ಆಕ್ರಮಿಸಿಕೊಂಡಿದ್ದಾರೆ.

ಉನ್ನತ ವಿದ್ಯಾಭ್ಯಾಸದಲ್ಲಿಯ ಅಸಮಾನತೆಯನ್ನು ಉತ್ತರ ಅಮೇರಿಕದಲ್ಲೂ ಕಾಣಬಹುದು. ಇಲ್ಲಿ ವಿಜ್ಞಾನ ಹಾಗೂ ಶಸ್ತ್ರಚಿಕಿತ್ಸೆಯಂಥ ಅಧ್ಯಯನಗಳ ಬಾಗಿಲು ಮಹಿಳೆಯರಿಗೆ ಹೆಚ್ಚು ಕಡಿಮೆ ಮುಚ್ಚಿದಂತೆಯೇ. ಅಂಥದ್ದರಲ್ಲೂ ಹೇಗೋ ಇಂಥಾ ಅಧ್ಯಯನಗಳ ಹೊಸ್ತಿಲು ತುಳಿಯುವ ಹೆಣ್ಣುಮಕ್ಕಳನ್ನು ಬಿಟ್ಟಿಗೆ ಸಿಕ್ಕ ಮಾಲಿನಂತೆ ನಡೆಸಿಕೊಳ್ಳಲಾಗುತ್ತದೆ. ಅವರು ಸತತವಾಗಿ ಲೈಂಗಿಕ ಕಿರುಕುಳದಿಂದ ಕೊಲೆಯವರೆಗೆ ಎಲ್ಲ ರೀತಿಯ ದೌರ್ಜನ್ಯಗಳನ್ನೂ ಎದುರಿಸಬೇಕಾಗುತ್ತದೆ. ಮ್ಯಾಕ್ ಗಿಲ್ ಯೂನಿವರ್ಸಿಟಿಯಲ್ಲಿ ಇಂಜಿನೀಯರಿಂಗ್ ವಿದ್ಯಾರ್ಥಿನಿಯೊಬ್ಬಳು ಕೊಲೆಗಡುಕನ ಕೈಗೆ ಸಿಕ್ಕು ಸತ್ತಿದ್ದು ಒಂದು ಉದಾಹರಣೆ. ಮಹಿಳಾ ಅಧ್ಯಯನವನ್ನೇ (Women's Studies) ಪ್ರೌಢ ಶಿಕ್ಷಣಕ್ಕೆಂದು ಆಯ್ದುಕೊಂಡ ಹೆಣ್ಣುಮಕ್ಕಳಿಗೆ ಉಳಿದವರಷ್ಟು ಸಾವಿನ ಭೀತಿ ಇರುವುದಿಲ್ಲವಾದರೂ, ಅವರ ವಿಚಾರಗಳನ್ನು ಮೂಲೆಗುಂಪಾಗಿಸಿ ಅವರ ಕೃತಿಗಳನ್ನು ಕೆಳಮಟ್ಟದವೆಂದು ಕಾಣುವುದರ ಜೊತೆಗೆ ಅವರ ಶೈಕ್ಷಣಿಕ ಆಧಾರಗಳನ್ನೇ ಪ್ರಶ್ನಿಸಲಾಗುತ್ತದೆ. ರಿತು ಮೆನನ್ ಹೇಳುವಂತೆ ಭಾರತದಲ್ಲಿ, "ಲಿಂಗಾಧರಿತ ದೃಷ್ಟಿಕೋನವನ್ನಿಟ್ಟುಕೊಂಡು ಬರೆಯುವವರನ್ನು ಪಕ್ಷಪಾತಿಗಳೆಂದೋ ಭೋಳೆ ಪಾಂಡಿತ್ಯ ಉಳ್ಳವರೆಂದೋ ದೂರಲಾಗುತ್ತದೆ. ರಾಜಕೀಯವಾಗಿ ತಮ್ಮನ್ನು ತೊಡಗಿಸಿಕೊಂಡವರಿಗೆ, ಆಕ್ಟಿವಿಸಂನಲ್ಲಿ ಸುಮ್ಮನೆ ಕಾಲಹರಣ ಮಾಡದೇ ಪಾಂಡಿತ್ಯ ಗಳಿಸುವೆಡೆ ಗಮನ ಹರಿಸಬೇಕೆಂದು ಹೇಳಲಾಗುತ್ತದೆ."

ಲೇಖಕಿಯರಾಗಬೇಕೆಂದು ಒಂದಿಷ್ಟು ಆಲೋಚನೆಯನ್ನು ಒಟ್ಟುಗೂಡಿಸಿ ಇಟ್ಟುಕೊಂಡ ಮಹಿಳೆಯರು ಬೇರೆ ರೀತಿಯ ತೊಡಕುಗಳನ್ನು ಎದುರಿಸಬೇಕಾಗುತ್ತದೆ. ಸಮಾನತೆಗಾಗಿ ಮಹಿಳೆಯರು ಸಾಕಷ್ಟು ಹೋರಾಡಿ ಮುಂದೆ ಬಂದಿರುವ ದೇಶಗಳಲ್ಲಿ ಸಹ, ರಾಜಕೀಯ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ಸಂಪೂರ್ಣವಾಗಿ ಪುರುಷ ಪ್ರಾಧಾನ್ಯತೆಯನ್ನು ಜೋಪಾನವಾಗಿ ಕಾಪಾಡಿಕೊಂಡು ಬರಲಾಗಿದೆ. 1986ರಲ್ಲಿ ನ್ಯೂಯಾರ್ಕ್‌ನಲ್ಲಿ ನೆರೆದ PENನ ಅಂತರ ರಾಷ್ಟ್ರೀಯ ಒಕ್ಕೂಟವನ್ನು ಭೂಗೋಳದ ಅತ್ಯುತ್ತಮ ಮನಸ್ಸುಗಳ ಒಕ್ಕೂಟವೆಂದು ಕಳೆಯಲಾಗಿದೆ. ಇಲ್ಲಿ 117 ಪ್ಯಾನಲಿಸ್ಟ್‌ಗಳ ಪೈಕಿ ಕೇವಲ 16 ಮಂದಿ ಮಹಿಳೆಯರಿದ್ದರು. ಇದನ್ನು ವಿರೋಧಿಸಿ ಲೇಖಕಿಯರು ಧರಣಿ ಹೂಡಿದಾಗ, "ಇದು ಬುದ್ಧಿಜೀವಿಗಳ ಒಕ್ಕೂಟವಾದ್ದರಿಂದ ಇದರಲ್ಲಿ ಪಾಲ್ಗೊಳ್ಳುವ ಯೋಗ್ಯತೆಯನ್ನು ಕೆಲವೇ ಮಹಿಳೆಯರು ಮಾತ್ರ ಪಡೆದಿರುತ್ತಾರೆ. ಆದ್ದರಿಂದ ಇಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ", ಎಂದು ಅಮೇರಿಕದ PENನ ಆಗಿನ ಅಧ್ಯಕ್ಷರಾದ ನಾರ್ಮನ್ ಮೈಲರ್ ಪತ್ರಿಕೆಗಳಿಗೆ ಹೇಳಿಕೆ ನೀಡಿದ್ದರು. ಇಷ್ಟೇ ಅಲ್ಲದೆ, ಓರ್ವ ಹೆಸರಾಂತ ಲೇಖಕಿಯ ಬಗ್ಗೆ "ಮನೆಯಲ್ಲೇ ಬಿದ್ದುಕೊಂಡಿರುವ ಹೌಸ್‌ವೈಫ್‌ನ ರೀತಿಯಲ್ಲಿ ಬಂದಿದ್ದಾಳೆ" ಎಂದೂ ಈತ ಉಲ್ಲೇಖಿಸಿದ್ದರು. "ಇನ್ನಾವುದೇ ಬಕರ ಸಿಕ್ಕುವುದಕ್ಕೂ ಈ ಹೆಂಗಸರು ಮುದಿಗೊಡ್ಡಾಗಿದ್ದಾರೆ" ಆದ್ದರಿಂದಲೇ ಇಷ್ಟೆಲ್ಲಾ ಬಿಂಕ ಮಾಡುತ್ತಾರೆ. ಇವರುಗಳಿಗೆ ತಮ್ಮ ಪುರುಷ ಅತಿಥಿಗಳ ನಡುವೆ ಸೋಗಲಾಡುವುದಕ್ಕೆ ಯಾವುದೇ ರೀತಿಯ ಅವಕಾಶವನ್ನೂ ತಾವು ನೀಡುವುದಿಲ್ಲ ಎನ್ನುವಂಥ ಮಾತುಗಳನ್ನು ನಾರ್ಮನ್ ಮೈಲರ್ ನುಡಿದಿದ್ದರು. ಇದನ್ನು ವಿರೋಧಿಸಿದ ಲೇಖಕಿಯರಿಗೆ ಸಾಕಷ್ಟು ಮಂದಿ ಲೇಖಕರು ಬೆಂಬಲ ನೀಡಿದ್ದರೂ ಮಿಕ್ಕವರು ಅವರನ್ನು ಮರ್ಯಾದೆಗೆಟ್ಟವರು ಎಂದು ಕಟುವಾಗಿ ಟೀಕಿಸಿದರು.

ಇಪ್ಪತ್ತು ವರ್ಷಕ್ಕೂ ಮೀರಿ ಮಹಿಳಾ ಅಧ್ಯಯನ ಹಾಗೂ ಆಂದೋಲನಗಳು ನಡೆದುಬಂದಿರುವ ಅಮೇರಿಕದಲ್ಲೇ ಈ ಪರಿಸ್ಥಿತಿಯಾದರೆ, ಇನ್ನು ಮಹಿಳಾ ಆಂದೋಲನಗಳು ಕ್ಷೀಣವಾಗಿದ್ದು ಈಗ ತಾನೆ ಕಾಲಿಡುತ್ತಿರುವ ದೇಶಗಳಲ್ಲಿ, ಪಿತೃಪ್ರಧಾನ ಸಂಸ್ಕೃತಿಯನ್ನು ಪ್ರಶ್ನಿಸಲೂ ಸಾಧ್ಯವಾಗದ ಪರಿಸ್ಥಿತಿ ಇರುವ ಕಡೆ ಇನ್ನು ಹೇಗಿದ್ದಿರಬೇಕು ಊಹಿಸಿಕೊಳ್ಳಿ? ಕೆಲವು ಭಾಷೆಗಳಲ್ಲಂತೂ ಸ್ತ್ರೀ ಹಾಗೂ ಪುರುಷ ಬರಹಗಾರರನ್ನು ಉಲ್ಲೇಖಿಸುವುದಕ್ಕೆ ಸಮಾನಾರ್ಥವುಳ್ಳ ಪದವೇ ಇಲ್ಲ. ಇದರಿಂದಾಗಿ ಲೇಖಕಿಯರು ವಿಚಿತ್ರವಾಗಿ ಕೀಳರಿಮೆಯನ್ನು ಅನುಭವಿಸಬೇಕಾಗುತ್ತದೆ. ನದೇದ ಅಗಿಕಿನರ ಪ್ರಕಾರ : ರಷ್ಯನ್ ಭಾಷೆಯಲ್ಲಿ "ಉಮನ್ ರೈಟರ್" ಎಂಬ ಪದವೇ ಸ್ತ್ರೀಲಿಂಗವನ್ನೊಳಗೊಂಡಿದೆ. ಈ ಪದವನ್ನು ಉಪಯೋಗಿಸುವುದಕ್ಕೇ ಬರಹಗಾರ್ತಿಯರು ಹಿಂಜರಿಯುತ್ತಾರೆ. ಏಕೆಂದರೆ ಈ ಪದವನ್ನು ಬಳಸುತ್ತಿದ್ದ ಹಾಗೇ ಗಂಡಸರು ಮುಸಿಮುಸಿ ನಗುತ್ತಾ "ಎಂಥದ್ದೋ ಒಂದು ಕೆಲಸಕ್ಕೆ ಬಾರದ ಹೆಡ್ಡ ಹೆಣ್ಣು ವಸ್ತು" ಎಂಬಂತೆ ಆಡಿಕೊಳ್ಳುತ್ತಾರೆ. ಆದ್ದರಿಂದ ಪ್ರಮುಖ ಕವಯಿತ್ರಿಯರು ಮತ್ತು ಲೇಖಕಿಯರು ತಮ್ಮ ಸೃಜನಾತ್ಮಕತೆಯ ಗುಣಮಟ್ಟವನ್ನು ಪ್ರತಿಪಾದಿಸಿಕೊಳ್ಳುವುದರ ಸಲುವಾಗಿ ಪುಲ್ಲಿಂಗ ಪ್ರಧಾನ ಪದವನ್ನೇ ಬಳಸುತ್ತಾರೆ. ಮಹಿಳಾ ಸೃಜನಾತ್ಮಕತೆ

ಯನ್ನು, ಮೂಲತಃ ಗಂಭೀರವಲ್ಲದ್ದು, ಅಸಮರ್ಥವಾದದ್ದು ಹಾಗೂ ಎರಡನೇ ದರ್ಜೆಯದ್ದೆಂದು ಪುರುಷರು ಕಾಣುತ್ತಾರೆ...... ಸಮಕಾಲೀನ ಲೇಖಕಿಯರ ಕೆಲವು ಪ್ರಭಾವಶಾಲಿ ಪುಸ್ತಕಗಳ ಬಗ್ಗೆ ಹೆಸರಾಂತ ವಿಮರ್ಶಕರು ನಿಯಮಕ್ಕೆ ಆಕ್ಷೇಪವಾಗಿ ಬಂದಿರುವಂಥ ಪುಸ್ತಕ ಎಂದು ಮಾತನಾಡುತ್ತಾರೆ.

ದೇಹ ಮತ್ತು ಲೈಂಗಿಕತೆಯನ್ನು ಕುರಿತು ಬರೆಯುವ ಧೈರ್ಯ ತೋರಿಸುವ ಲೇಖಕಿಯರನ್ನು ಕೆಟ್ಟ ಹೆಂಗಸರು ಎಂದು ಹೆಸರಿಸಲಾಗುತ್ತದೆ. ಅಂಥವರ ಪರಿಸ್ಥಿತಿ ಇನ್ನೂ ಬಿಕ್ಕಟ್ಟಿನದ್ದಾಗಿದೆ. ಸ್ತ್ರೀ ಲೈಂಗಿಕತೆ, ಪ್ರಸವ, ಆರೋಗ್ಯದಂಥ ಉಳಿದ ಯಾವುದೇ ವಿಷಯ, " ಸೌಂದರ್ಯ ಮೀಮಾಂಸೆ"ಯ ಚೌಕಟ್ಟಿನಲ್ಲಿ ಬಾರದ್ದು ಗದ್ಯದಲ್ಲಿ ಕಂಡುಬಂದರೆ, "ಹೊಲಸು ಶೈಲಿಯ ಬರವಣಿಗೆ" ಎಂದೋ ಅಥವಾ "ಕೆಟ್ಟ ಅಭಿರುಚಿ"ಯದ್ದೆಂದೋ ದೂಷಿಸಲಾಗುತ್ತದೆ. ರಾಷ್ಟ್ರೀಯ ಸಾಹಿತ್ಯಿಕ ವಾರ ಪತ್ರಿಕೆಯಾದ Literaturnya Gazetaದಲ್ಲಿ ಇಂಥದ್ದೇ ಒಂದು ಉಲ್ಲೇಖವಿತ್ತು. ಅದರಲ್ಲಿ "ಹೆಂಗಸರಿಗೆ ಆತ್ಮವಿಲ್ಲ, ಅವರ ಆತ್ಮ ಅವರ ದೇಹಕ್ಕೆ ತೀರ ಸಮೀಪದಲ್ಲೆಲ್ಲೋ ಇದೆ" ಎಂದು ಬರೆಯಲಾಗಿತ್ತು.

ಮಹಿಳೆಯರ ಕೃತಿಗಳು ಎಷ್ಟೇ ಉತ್ತಮ ಗುಣ ಮಟ್ಟದ್ದಾಗಿರಲಿ, ಪಿತೃಪ್ರಧಾನ ಧೋರಣೆ ಅದರ ಪ್ರಕಟಣೆಗೆ ತೊಡಕನ್ನು ಉಂಟುಮಾಡುತ್ತದೆ. ಮಹಿಳೆಯರಿಗೆ ಲೇಖಕಿಯರಾಗುವ ಅಧಿಕಾರವಿಲ್ಲವೆಂದು ಪರಿಗಣಿಸಿದ ಕೆಲವು ದೇಶಗಳಲ್ಲಿ ಅವರಿಗೆ ಪ್ರಕಟಣೆಯ ಅವಕಾಶವೇ ಇರುವುದಿಲ್ಲ ಅಥವಾ ಅವರು ಮಹಿಳೆಯರು ಬರೆಯಬೇಕಾಗಿದ್ದ ರೀತಿಯಲ್ಲಿ ಬರೆಯುತ್ತಿಲ್ಲವೆಂದೋ ಅಥವಾ ತಮಗೆ ತಿಳಿಯದ ವಿಷಯದ ಬಗ್ಗೆ ಬರೆದಿದ್ದಾರೆಂದೋ ಅವರ ಬರಹವನ್ನು ತಡೆಯಲಾಗುತ್ತದೆ. ಏಕೆಂದರೆ, ಸೆನ್ಸಾರ್ ಎನ್ನುವುದು, ಇಂಥಾ ವಿಷಯ ಅಥವಾ ವಿಚಾರವನ್ನು ಕುರಿತು ಮಾತ್ರವೇ ಮಹಿಳೆಯರು ಬರೆಯಬೇಕು ಎಂದೋ; ಇಲ್ಲವೆ ಇಂಥಾ ವಿಷಯ ಅಥವಾ ವಿಚಾರವನ್ನು ಕುರಿತು ಅವರು ಬರೆಯಬಾರದು ಎಂದೋ ಮಹಿಳೆಯರಿಗಾಗಿ ಕೆಲವು ಕಾಯಿದೆ ಕಾನೂನುಗಳನ್ನು ಹುಟ್ಟುಹಾಕುತ್ತದೆ. ಹೀಗೆ ಮಹಿಳೆಯರಿಗೆಂದೇ ಒಂದು ಗಡಿಯನ್ನು ಸೃಷ್ಟಿಸಿ, ಅದನ್ನು ಪಾರುಮಾಡುವ ಪ್ರಯತ್ನ ಮಾಡಿದವರನ್ನು ಟೀಕಿಸುತ್ತದೆ. ನೇಪಾಳದ ಖ್ಯಾತ ಲೇಖಕಿಯೊಬ್ಬರಿಗೆ ಅವರ ವಿವಾಹ ವಿಚ್ಛೇದನದ ನಂತರ ಸಮಸ್ಯೆಗಳು ಹುಟ್ಟಿಕೊಂಡವು. "ಆಕೆ ತನ್ನ ಗಂಡನ ಜೊತೆ ಬಾಳುವೆ ಮಾಡುತ್ತಿಲ್ಲವಾದ್ದರಿಂದ ಅವರ ಪುಸ್ತಕವನ್ನು ನಾವು ಪ್ರಕಟಿಸಲಾಗುವುದಿಲ್ಲ" ಎಂದು ಪ್ರಕಾಶಕರು ಹೇಳಿದರು. ಲೇಖಕಿಯೊಬ್ಬಳ ಜೀವನ ಕ್ರಮವೂ ಸಹ ವಿವಾದಾತ್ಮಕವಾಗಬಲ್ಲದು ಎನ್ನುವುದಕ್ಕೆ ಇದೇ ಉದಾಹರಣೆ.

ರಷ್ಯದಲ್ಲಿ ಸೋವಿಯತ್ ಅವಧಿಯಲ್ಲಿ ಪುಸ್ತಕ ಪ್ರಕಟಣಾಲಯಗಳು ಪುರುಷರ ಪುಸ್ತಕಗಳಿಗೇ ಹೆಚ್ಚಿನ ಮಾನ್ಯತೆ ನೀಡುತ್ತಿತ್ತು. ಅಂತರ ರಾಷ್ಟ್ರೀಯ ಮಹಿಳಾ ದಿನವಾದ ಮಾರ್ಚ್ 8 ರಂದು ಮಾತ್ರ ಮಹಿಳೆಯರ ಪುಸ್ತಕಗಳು ಬೆಳಕು ಕಾಣುತ್ತಿದ್ದುದು. ಈಗಲೂ ಪರಿಸ್ಥಿಯಲ್ಲಿ ಹೆಚ್ಚು ವ್ಯತ್ಯಾಸವೇನೂ ಆಗಿಲ್ಲ. ಸುಮಾರು ಲೇಖಕಿಯರ ಪ್ರಕಾರ ಆಫ್ರಿಕಾದ ಪ್ರಕಾಶಕರಲ್ಲೂ ಇಂಥದ್ದೇ ಮಾನ್ಯತೆ ಕಂಡುಬರುತ್ತದೆ. 'ನರ್ವಸ್ ಕಂಡೀಷನ್ಸ್' ಎಂಬ ಪ್ರಖ್ಯಾತ ಕಾದಂಬರಿಯ ಲೇಖಕಿ ಸಿಸಿ ದಾಂಗರೆಂಬ. ಇವರ ಈ ಕೃತಿಯು ವಿದೇಶದಲ್ಲಿ ಪ್ರಕಟವಾಯಿತು. ತಮ್ಮ ಪುಸ್ತಕವನ್ನು ತಮ್ಮದೇ ದೇಶದಲ್ಲಿ ಪ್ರಕಟಿಸಲು ಅಸಾಧ್ಯವಾದದ್ದರ ಬಗ್ಗೆ ಅವರು ಬರೆದಿದ್ದಾರೆ : ನನ್ನ ಪುಸ್ತಕವನ್ನು ನನ್ನದೆ ದೇಶದಲ್ಲಿ ಪ್ರಕಟಿಸಲು ಅಸಾಧ್ಯವಾದುದಕ್ಕೆ ವ್ಯಾವಹಾರಿಕ ವಿಚಾರಗಳು ಖಂಡಿತವಾಗಿಯೂ ಕಾರಣ. ಯಾರೇ ಬರೆದಿದ್ದಿರಲಿ ಝಿಂಬಾಬ್ವೆಯಲ್ಲಿ ಟೆಕ್ಸ್ಟ್ ಬುಕ್ಕುಗಳಿಗೆ ಇರುವ ಮಾರುಕಟ್ಟೆ ಕಾದಂಬರಿಗಳಿಗಿಲ್ಲ. ನಾನು ಆಯ್ದುಕೊಂಡಿರುವ "ಸುರಕ್ಷಿತವಲ್ಲದ ವಿವಾದ"ಗಳ ತನಿಖೆಯೇ ಈ ಪುಸ್ತಕದ ಪ್ರಕಟಣೆಗೆ ತೊಡಕಾಯಿತೋ ಹೇಗೆ ಎಂದು ನಾನು ಆಲೋಚಿಸಲು ಆರಂಭಿಸಿದೆ. ಹೀಗೆ ಒಂದು ವಿಚಾರ, 'ಬಯಾನೀಸ್ ಅವೆನ್ಯೂವೇ' ಅನ್ನುವ ನಾಟಕವನ್ನು ತಿರಸ್ಕರಿಸಲಾಗಿತ್ತು. ಈ ನಾಟಕದ ಮುಖ್ಯ ಪಾತ್ರ ಮತ್ತು ಸೂತ್ರಧಾರಿಣಿ ಒಬ್ಬ ಹೆಣ್ಣು. ಅವಳು ತನ್ನ ದೇಹವನ್ನು ಗಂಡಸರಿಗೆ ಮಾರಿಕೊಂಡು ಜೀವನ ನಡೆಸುತ್ತಿರುತ್ತಾಳೆ. ಮತ್ತೊಂದು ಪಾತ್ರ, ಮದುವೆಯಾದ ಇನ್ನೊಬ್ಬ ಹೆಣ್ಣು. ಅವಳು ಗಂಡ ಮತ್ತು ಅತ್ತೆಯ ಮನೆಯವರ ಬೈಗುಳದಲ್ಲಿ ನರಕಯಾತನೆ ಅನುಭವಿಸುತ್ತಿರುವವಳು. ಮೊದಲನೆಯವಳ ಮನೆಯೊಳಗೆ ತನ್ನ ಗಂಡನೂ ಹೋದದ್ದನ್ನು ನೋಡಿ, ಈ ಮರ್ಯಾದಸ್ಥ ಹೆಂಗಸು ಮೊದಲನೆಯವಳ ಮನೆ ಬಾಗಿಲಲ್ಲೇ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಕರುಣಾಭರಿತ ಪುರುಷ ಸಂಪಾದಕನಿಗೆ ಈ ಇಬ್ಬರೂ ಹೆಂಗಸರೂ ಅಶ್ಲೀಲರಾಗಿ, ಈ ಜಗತ್ತಿನಲ್ಲಿ ಬದುಕಲು ಅನರ್ಹರಾಗಿ ಕಂಡಿರಬೇಕು..... ಇಂಥಾ ವಿವಾದಗಳ ಬಗ್ಗೆ ಬರೆಯುವ ಅವಶ್ಯಕತೆಯಿದೆ ಎಂದು ಒಂದೆಡೆ ಹೇಳಿದರೆ, ಮತ್ತೊಂದೆಡೆಯಲ್ಲಿ ಬರೆದದ್ದನ್ನು ಯಾರೂ ಪ್ರಕಟಿಸಿರುವುದಿಲ್ಲ. ಇಡೀ ಸಂದರ್ಭವೇ ಇಬ್ಬದಿಯ ಕಣ್ಣು ಕಟ್ಟಿನಾಟವನ್ನು ತೆರೆದಿಡುತ್ತದೆ.

ರಾಜಕೀಯವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಲೇಖಕಿಯರು ಹಾಗೂ ಫೆಮಿನಿಸ್ಟರು, ಮಹಿಳೆಯರ ಪರಿಸ್ಥಿತಿಯ ಬಗ್ಗೆ ಪ್ರಾಮಾಣಿಕರಾಗಿ ಬರೆದು ಖಂಡಿಸಿದಾಗ, ಅದರ ಪರಿಣಾಮ ಗಂಭೀರವಾಗಿದ್ದಲ್ಲಿ ಅವರಿಗೆ ಅಸಾಧ್ಯ ತೊಂದರೆ ತಪ್ಪಿದ್ದಲ್ಲ. ಎಷ್ಟೋ ಸಾರಿ ಅವರುಗಳು ದೇಶ ಬಿಟ್ಟು ಹೋಗಬೇಕಾದ ಸಂದರ್ಭ ಒದಗಿಬರುತ್ತದೆ. ಇಲ್ಲವೆ ಕಾರಾಗೃಹವಾಸ, ಅತ್ಯಾಚಾರ, ಕೊಲೆಯ ಬೆದರಿಕೆ, ಗಡಿಪಾರಿನ ಶಿಕ್ಷೆ ಅಥವಾ ಕೊಲೆಯಂಥಾ ಭೀಕರ ರೂಪದ ಸೆನ್ಸಾರ್‌ನ್ನು ಎದುರಿಸ ಬೇಕಾಗುತ್ತದೆ. ಸರ್ಕಾರದ ಒತ್ತಡ ಅಥವಾ ಧಾರ್ಮಿಕ ಸೆನ್ಸಾರ್ ಇಲ್ಲದಾಗ ಸಹ ಪ್ರಕಟಣಾ ಮಾಧ್ಯಮದಲ್ಲಿರುವ ತೊಡಕುಗಳಿಂದಾಗಿ ಮಹಿಳೆಯರು ತಮ್ಮ ಓದುಗರನ್ನು ತಲುಪಲಾರರು. ದಕ್ಷಿಣದ ಹೆಚ್ಚಿನ ಪ್ರಕಟಣಾಲಯಗಳು ಸಣ್ಣವು ಮತ್ತು ಸದಾ ಜಗಳಕ್ಕೆ ತಯಾರಾಗೆ ನಿಂತಿರುವಂಥವು. ಪುಸ್ತಕ, ಮಾರಾಟವಾಗಿ ಹಣ ತರುತ್ತದೆಂದು ಕಂಡರೆ ಮಾತ್ರ ಉತ್ತರದ ಪ್ರಕಾಶಕರು ಆಸಕ್ತಿ ತೋರಿಸುತ್ತಾರೆ. ಯಾವುದೇ ದೇಶ ದಲ್ಲಾಗಲೀ, ಅದರಲ್ಲೂ ಸಂಪ್ರದಾಯವಾದಿ ಘಟ್ಟದಲ್ಲಿ ಸಾಧಾರಣವಾಗಿ ಕಟುವಾಗಿ ಖಂಡಿಸುವ ಧ್ವನಿಯನ್ನುಳ್ಳ ಪುಸ್ತಕದಿಂದ ಪ್ರಕಾಶಕರು ದೂರ ಸರಿದುಬಿಡುತ್ತಾರೆ. ಲೈಂಗಿಕ ಅತ್ಯಾಚಾರವನ್ನು, ಜಾತಿ/ವರ್ಗ ಭೇದವನ್ನು, ವಸಾಹತು ಶಾಹಿಯನ್ನು ಖಂಡಿಸಿರುವಂಥ ಕೃತಿಗಳನ್ನು ಕೊಂಡೊಯ್ದರೆ, "ಸುಮ್ಮನೆ ಎಲ್ಲವನ್ನೂ ಟೀಕಿಸುವ ಪುಸ್ತಕ ನಮಗೆ ಬೇಡ," ಎನ್ನುತ್ತಾರೆ. ಅಥವಾ "ಓ! ಪುನಃ ಇದೇ ಅರವತ್ತರ ಮಾತೇ!" ಎಂದೋ; ಇಲ್ಲವೆ, "ಎಲ್ಲೋ ಒಂದಷ್ಟು ಜನ ಹಿಂದುಳಿದ ವರ್ಗದವರು ಈ ಪುಸ್ತಕವನ್ನು ಕೊಳ್ಳಬಹುದು. ಅದು ಬಿಟ್ಟರೆ ಹಿಂದುಳಿದ ವರ್ಗದ ಅನುಭವವನ್ನೊಳಗೊಂಡ ಇಂಥಾ ರಾಜಕೀಯ ಪುಸ್ತಕಗಳನ್ನು ಪ್ರಕಟಿಸುವುದರಿಂದ ನಮಗೆ ಯಾವುದೇ ರೀತಿಯ ಲಾಭ ಅಥವಾ ಅನುಕೂಲ ಇಲ್ಲ" ಎಂದುಬಿಡುತ್ತಾರೆ.

1992ರಲ್ಲಿ ಝಿಂಬಾಬ್ವೆಯಲ್ಲಿ ನಡೆದ ಬುಕ್ ಫೇರ್‌ನಲ್ಲಿ ಜರ್ಮನಿಯ ಹೆಸರಾಂತ ಪ್ರಕಾಶಕರ ಪ್ರತಿನಿಧಿಯೊಬ್ಬ ಮಾತನಾಡಿದನಂತೆ. ಯೂರೋಪಿಯನ್ನರು ವಸಾಹತುಶಾಹಿಯ ಬಗ್ಗೆ ಕೇಳಿ ಕೇಳಿ ದಣಿದು ಹೋಗಿದ್ದಾರೆ. ಅವರು ಏನಾದರೂ ಹೊಚ್ಚ ಹೊಸ ವಿಷಯದ ಬಗ್ಗೆ ಕೇಳಲು ಇಷ್ಟಪಡುತ್ತಾರೆ, ಎಂದು ಇವನು ಲೇಖಕರನ್ನು ಕುರಿತು ಮಾತನಾಡುವಾಗ ಹೇಳಿದ್ದನ್ನು ಅಮ ಆತ ಅಯ್ದೂರವರು ಜ್ಞಾಪಿಸಿಕೊಳ್ಳುತ್ತಾರೆ. "ದೌರ್ಜನ್ಯಕ್ಕೆ ಒಳಗಾದವರ ಕಥೆಯನ್ನು ನಾವು ಸಾಕಷ್ಟು ಕೇಳಿ ಬಿಟ್ಟಿದ್ದೇವೆ" ಎಂದೋ "ಇನ್ನು ಸಿಟ್ಟಿನ ಸಮಯ ಮುಗಿಯಿತು" ಎಂದೋ ಮಹಿಳೆಯರಿಗೆ ಅಮೇರಿಕಾದ ಪ್ರಕಾಶಕರು ಹೇಳಿದರೆ; ಚಿಲಿಯಲ್ಲಿ "ಕಳೆದು ಹೋದ ಘಟನೆಗಳ ದುಃಖದಲ್ಲೇ ಇನ್ನೂ ಸಹ ಬದುಕುವುದು ಯೋಗ್ಯವಲ್ಲ, ಇದು ಸಂಧಾನ, ಸಮಾಧಾನದ ಸಮಯ" ಎಂದು ಹೇಳುತ್ತಾರೆ.

ಫೆಮಿನಿಸ್ಟ್ ನಿರ್ಬಂಧಿತ ಪರ್ಯಾಯ ಪ್ರೆಸ್ ಇಲ್ಲದೇ ಹೋಗಿದ್ದರೆ ಇವತ್ತು ಸೃಜನಾತ್ಮಕ ಹಾಗೂ ಸಾಮಾಜಿಕ ವಿಮರ್ಶೆಗೆ ಸಂಬಂಧಪಟ್ಟ ಮಹಿಳಾ ಬರವಣಿಗೆಗಳು ಬೆಳಕಿಗೇ ಬರುತ್ತಿರಲಿಲ್ಲ. ಆಫ್ರಿಕಾದ ಲೇಖಕಿಯರಿಗೆ ತಮ್ಮ ದೇಶದಲ್ಲೇ ಪ್ರಕಟಿಸುವುದು ಅಸಾಧ್ಯವೆಂದು ತಿಳಿದ ಕಾದಂಬರಿಗಾರ್ತಿ ಫ್ಲೋರಾ ನ್ವಾಪ (1931-1993)ರವರು ನೈಜೀರಿಯಾದಲ್ಲಿ ತಮ್ಮ ಸ್ವಂತ ಪ್ರಕಟಣಾಲಯವನ್ನು ತೆರೆದರು. ಮಹಿಳಾ ಕೃತಿಗಳ ಬಗ್ಗೆ ಉತ್ತರದ ಪ್ರಕಾಶಕರ ಅನಾಸಕ್ತಿಗೆ ಉತ್ತರವಾಗಿ ಫ್ಲೋರಾರ ಕಂಪನಿ, 'ತಾನ ಪ್ರೆಸ್' ಕೆಲಸ ಮಾಡಿತು; ಫ್ಲೋರಾ ಮತ್ತು ಉಳಿದ ಆಫ್ರಿಕನ್ ಲೇಖಕಿಯರ ಪುಸ್ತಕಗಳನ್ನು ಪ್ರಕಟಿಸಿತು. ವಸಾಹತು ಶಾಹಿಯಲ್ಲದ ಪ್ರದೇಶಗಳ ಮಕ್ಕಳ ಸಾಹಿತ್ಯದ ಉತ್ತಮ ಪುಸ್ತಕಗಳು ಘಾನಾದ ಮಕ್ಕಳಿಗೆ ಲಭ್ಯವಾಗಬೇಕೆಂದು ಘಾನಾದ ನಾಟಕಕಾರ್ತಿ ಇಫುವಾನ ಸದರ್ಲ್ಯಾಂಡ್ ಪ್ರಕಟಣಾಲಯ ವೊಂದನ್ನು ಆರಂಭಿಸಿದರು. ಇದೇ ರೀತಿಯಲ್ಲಿ ಲಿಂಗಾಧಾರಿತ ಸೆನ್ಸಾರ್‌ನ್ನು ವಿರೋಧಿಸಿ ಏಷ್ಯಾ, ಲ್ಯಾಟಿನ್ ಅಮೇರಿಕಾ ಮತ್ತು ಇನ್ನೂ ಹಲವೆಡೆ ಫೆಮಿನಿಸ್ಟ್ ಪ್ರೆಸ್‌ಗಳು ಹುಟ್ಟಿಕೊಂಡಿವೆ. ರಿತು ಮೆನನ್ ಮತ್ತು ಊರ್ವಶಿ ಬುಟಾಲಿಯ ಹೇಳುಂತೆ : ನಿಯತ ಕಾಲಿಕೆಗಳ ಮೂಲಕ, ತಾತ್ವಿಕ ಚರ್ಚೆಗಳ ಮೂಲಕ, ಪುಸ್ತಕಗಳ ಮೂಲಕ, ಪತ್ರಿಕೆಗಳ ಮೂಲಕ ಪ್ರಪಂಚದಾದ್ಯಂತ ಮಹಿಳೆಯರು ಸ್ವಯಂ ಪ್ರೇರಿತರಾಗಿ, ಪ್ರಜ್ಞಾಪೂರ್ವಕವಾಗಿ, ಉದ್ದೇಶ ಪೂರ್ವಕವಾಗಿ, ಬೇರೆ ಪ್ರಪಂಚವನ್ನೇ ಸೃಷ್ಟಿಸಿಕೊಂಡು, ತಾವು ಬದುಕುತ್ತಿರುವ ಪ್ರಪಂಚವನ್ನು ಟೀಕಿಸಿದ್ದಾರೆ. ಯಾವ ಸಂಸ್ಕೃತಿ ಗಳಲ್ಲಿ ಮಹಿಳೆಯರಿಗೆ ವಿದ್ಯಾಭ್ಯಾಸವನ್ನು ನಿಷೇಧಿಸಲಾಗಿದೆಯೋ ಅಲ್ಲಿ ಅವರು ವಿದ್ಯಾಭ್ಯಾಸ ತಮ್ಮ ಅವಶ್ಯಕತೆ ಮತ್ತು ಹಕ್ಕು ಎಂದು ಅರ್ಥೈಸಿಕೊಂಡಿದ್ದಾರೆ. ಮುದ್ರಣದ ಸೌಲಭ್ಯಗಳು ಕೈಗೆಟುಕದಾಗ, ಬಿತ್ತಿಪತ್ರಗಳನ್ನು ಹಾಡುಗಳನ್ನು ಹಾಗೂ ಕಡಿಮೆ ಖರ್ಚಿನ ಸಾಮಗ್ರಿಗಳ ಮೂಲಕ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಂಡಿದ್ದಾರೆ. ಮಹಿಳೆಯರು ಬರೆಯಲು ಹಿಂಜರಿವ ಜಾಗಗಳಿಗೆ ಹೋಗಿ ಅವರಲ್ಲಿ ಆತ್ಮವಿಶ್ವಾಸ ತುಂಬುವುದರ ಸಲುವಾಗಿ ಮೀಟಿಂಗ್‌ಗಳನ್ನು ನಡೆಸಿದ್ದಾರೆ. ಮೊದಲು ಮಾತನಾಡುವುದಕ್ಕೆ ಅನಂತರ ಬರೆಯುವುದಕ್ಕೆ ಉತ್ತೇಜನ ನೀಡಿದ್ದಾರೆ. ಅಥವಾ ಅವರು ಹೇಳಿದ್ದನ್ನೆಲ್ಲಾ ಬರೆದುಕೊಂಡು

ಪ್ರಕಟಿಸಿದ್ದಾರೆ. ಇಂಟರ್‌ವ್ಯೂಗಳು, ನಕಲು ಪ್ರತಿಗಳು, ವರದಿಗಳು, ವ್ಯಕ್ತಿಚಿತ್ರಗಳು ಹಾಗೂ ದಾಖಲೆಗಳ ಮೂಲಕ ಮಹಿಳೆಯರು ನೀಡಿರುವ ಸಾಕ್ಷ್ಯ ಪ್ರಮಾಣಗಳನ್ನು ಸಂಗ್ರಹಿಸಿ ಕಳೆದ ಕೆಲವು ವರ್ಷಗಳಲ್ಲಿ ಕೆಲವು ಸಂಸ್ಥೆಗಳು ನಮಗೆ ಒದಗಿಸಿವೆ. ಮಹಿಳೆಯರ ಪುಟ್ಟ ಗುಂಪುಗಳು, ಮುಸ್ಲಿಂ ಕಾನೂನಿನಡಿ ಬದುಕುತ್ತಿರುವ ಮಹಿಳೆಯರ ಗುಂಪುಗಳು, ಮೂಲಭೂತವಾದವನ್ನು ವಿರೋಧಿಸುವ ಮಹಿಳೆಯರ ತಂಡಗಳು ಹಾಗೂ ಲಿಂಗಾಧಾರಿತ ದೌರ್ಜನ್ಯವನ್ನು ವಿರೋಧಿಸುವ ಗುಂಪು ಗಳಾದ Red Feminista Latinoamericana y Caribe contra la Violecia Domestica y Sexual, Fempress, Naida, Firebrand, Sister Vision ......ದಂಥಾ ಸಂಸ್ಥೆಗಳು ಅವುಗಳಲ್ಲಿ ಕೆಲವು.

ಪ್ರಪಂಚದಾದ್ಯಂತ ವಿವಿಧ ಸಂಸ್ಕೃತಿ ಮತ್ತು ಜನಾಂಗಗಳಲ್ಲಿ ಮೌನವನ್ನು ಮುರಿಯಬೇಕೆನ್ನುವ ಒತ್ತಾಸೆ ಪ್ರತಿಧ್ವನಿಸುತ್ತಿದೆ. ಈ ಒತ್ತಾಸೆಯನ್ನು ಪ್ರತಿಪಾದಿಸಲು ಬೇಕಾದ ಅವಕಾಶಗಳನ್ನು ಸೃಷ್ಟಿಸಿಕೊಳ್ಳಲಾಗುತ್ತಿದೆ. "ಇದು ಟೆಕ್ಸ್‌ಚರ್ ಉಳ್ಳ ಪ್ರತಿಧ್ವನಿಸುವ ಕೋಣೆ. ಇಲ್ಲಿಂದ ನಾವು ನುಡಿಯುವ ಹೊಸ ಧ್ವನಿಗಳ ಒಂದೊಂದು ಶಬ್ದವೂ ನಮ್ಮ ಕಿವಿಯನ್ನು ತಲುಪುವ ಮೊದಲೇ ಈ ಕೋಣೆಯ ವಿಸ್ತಾರವನ್ನು ಬದಲಿಸುತ್ತದೆ. ನಮ್ಮ ಬರವಣಿಗೆ, ಮಾತು, ಬದುಕು, ನಮಗೆ ಸಂಬಂಧಿಸಿದ ಪ್ರತಿಮೆಗಳು ಎಲ್ಲವೂ ಸೇರಿ ಬೇರೆಯೇ ಪ್ರಪಂಚದ ಸೃಷ್ಟಿಯಾಗುತ್ತದೆ......." ಎಂದು ಹೇಳುತ್ತಾರೆ ಸುಸಾನ್ ಗ್ರಿಫಿನ್.

ಆರ್ಥಿಕ ಕಾರಣಗಳಿಂದಾಗಿ ಸುಮಾರು ಜನ ಲೇಖಕಿಯರು ಹೆಸರಾಂತ ಪ್ರಕಾಶಕರ ಹತ್ತಿರವೇ ಪ್ರಕಟಿಸಬೇಕಾಗುತ್ತದೆ. ಇದಕ್ಕೆ ಎಷ್ಟೋ ಕಾರಣಗಳಿದ್ದಾವು. ಪರ್ಯಾಯ ಪ್ರೆಸ್ಸಿನಲ್ಲಿ ಪ್ರಕಟಿಸಬೇಕಾಗುವುದರಿಂದ ತಮ್ಮ ಪುಸ್ತಕಕ್ಕೆ ತಕ್ಕ ಅವಕಾಶ ಸಿಕ್ಕದೆ ಮೂಲೆ ಗುಂಪಾದೀತೆಂಬ ಭಯವೂ ಇದ್ದಿರಬಹುದು. ಆದರೆ, ದೊಡ್ಡ ಪ್ರಕಾಶಕರ ಮಾತೇ ಬೇರೆ. ಮಹಿಳೆಯರು, ಹಿಂದುಳಿದ ವರ್ಗ/ಜಾತಿ ಅಥವಾ ಗೇ ಗುಂಪುಗಳಿಗೆ ಮಾತ್ರ ಓದುಗರ ಸಂಖ್ಯೆ ಸೀಮಿತವೆಂದು ಭಾವಿಸಿ ಅವರು ಪುಸ್ತಕವನ್ನು ಕೈಗೆತ್ತಿಕೊಳ್ಳದಿರ ಬಹುದು. ಕ್ರಿಸ್ತಿನಾ ದ ಫೋನ್ಸೆಕಾ ಮತ್ತು ಮಾರ್ಜೇರಿ ಅಗೋಸಿನ್ನರ ಪ್ರಕಾರ ಚಿಲಿಯಲ್ಲಿನ ಪುಸ್ತಕ ಮಾರಾಟಗಾರರ ದೃಷ್ಟಿಕೋನವೂ ಇದೇ ರೀತಿಯದ್ದು. ಮಾರಾಟವಾಗುವುದಿಲ್ಲ ವೆಂದು ಪುಸ್ತಕ ಮಾರಾಟಗಾರರು ಮಹಿಳೆಯರು ಬರೆದ ಪುಸ್ತಕಗಳನ್ನು ಅಂಗಡಿಯಲ್ಲಿ ಪ್ರದರ್ಶನಕ್ಕೆ ಸಹಿತ ಇಡುವುದಿಲ್ಲ. ಮಹಿಳೆಯರು ಬರೆದ ಪುಸ್ತಕಗಳು ಯಾವುದಾದರೂ ಅಂಗಡಿಯ ಶೋಕೇಸಿನಲ್ಲಿ ಕಣ್ಣಿಗೆ ಬಿದ್ದರೆ ಆಶ್ಚರ್ಯವೇ ಸರಿ.

ಒಂದು ಸಾರಿ ಪುಸ್ತಕ ಪ್ರಕಟವಾದರೆ, ಅದಕ್ಕೆ ವಿಮರ್ಶೆ ಬರಬೇಕು. ಪುಸ್ತಕ ವಿಮರ್ಶೆಯೇ ಲಿಂಗಾಧಾರಿತ ಸೆನ್ಸಾರಿನ ಅತಿ ಮುಖ್ಯ ವಲಯ. ಪುರುಷ (ಅಥವಾ ವಿಧೇಯ ಮಹಿಳಾ) ವಿಮರ್ಶಕರು ಲೇಖಕಿಯರು ಬರೆದ ಪುಸ್ತಕಗಳನ್ನು ಅದರ ವಿಷಯದ ಸಲುವಾಗಿ, ರೂಪದ ಸಲುವಾಗಿ ಅಥವಾ ಸುಮ್ಮನೆ ಮಹಿಳೆಯೊಬ್ಬಳ ಬರವಣಿಗೆ ಎಂತಲೋ ಕ್ಷುಲ್ಲಕವಾಗಿ ಕಾಣಬಹುದು. ಇಂಥಾ ವಿಮರ್ಶೆಗಳಲ್ಲಿ ಯಾವ ವೈಶಿಷ್ಟ್ಯವೂ ಇರುವುದಿಲ್ಲ. ಇಲ್ಲಿ ಲೇಖಕಿಯು; ಅವಳು ಸೇರಿದ ವರ್ಗದವರು ಈಗಾಗಲೇ ಹೇಳಿ ಬಿಟ್ಟಿರುವ ಆಶಯಗಳನ್ನೇ ಹೇಳುತ್ತಾಳೆಂದೊ ಅಥವಾ ಆ ವರ್ಗದ ಆಶಯಗಳ ಜೊತೆಗೆ ತನ್ನನ್ನು ಸಮೀಕರಿಸಿ ಕೊಂಡಿಲ್ಲವೆಂದೋ ನಿಂದಿಸಲಾಗಿರುತ್ತದೆ. ಉತ್ತರದಲ್ಲಿ ಲಿಂಗಾಧಾರಿತ ದೃಷ್ಟಿಕೋನವನ್ನು ವಿರೋಧಿಸಿ ಬರೆಯುವ ಲೇಖಕಿಯರ ಧ್ವನಿ (ಬರಹ)ಯನ್ನು "ಕೀರಲು", "ಕಿರುಚಾಟ", "ಕರ್ಕಶ" ಅಥವಾ "ಸ್ತ್ರೀ ಸಹಜವಲ್ಲದ್ದು" ಎಂದು ಟೀಕಿಸಲಾಗುತ್ತಿದೆ. ಏನಾದರೂ ಮಾನ್ಯತೆಯನ್ನು ಪಡೆಯ ಬೇಕೆಂದರೆ ಅದು ಸಂಪ್ರದಾಯಬದ್ಧವಾಗಿ ಪ್ರಚಾರದಲ್ಲಿರುವ ಸ್ತ್ರೀ ಸಹಜದ ಚೌಕಟ್ಟಿನೊಳಗೆ ಇರಬೇಕು. ಮುಂಚಿನ ಯುಗೋಸ್ಲಾವಿಯದ ಮಾತನ್ನು, ರ್‍ಯಾಡ ಇವ್ಯಾಕೊವಿಕ್ ಹೇಳುತ್ತಾರೆ : ಪುರುಷ ವಿಮರ್ಶಕರು ಮಹಿಳೆಯರ ಬರವಣಿಗೆ ಯನ್ನು ವಿಮರ್ಶಿಸಿದ್ದೇ ಆದರೆ ಅದನ್ನು ಕುರಿತು ಹೀನಾಯವಾಗಿ ಬರೆಯುತ್ತಾರೆ. ಕೆಲವು ಮಹಿಳೆಯರ ಬರವಣಿಗೆಯನ್ನು ವಿಮರ್ಶಿಸಿದ್ದೇ ಆದರೆ; ಅದನ್ನು ಕುರಿತು ವ್ಯಂಗ್ಯವಾಗಿ ಅವಮಾನಿಸಿ ಬರೆಯುತ್ತಾರೆ. ಕೆಲವು ಮಹಿಳಾ ವಿಮರ್ಶಕರೂ ಹೀಗೆ ಮಾಡುತ್ತಾರೆ. ಅವರಿಂದ ಬಯಸಲಾಗುವಂಥಾ ವಿಮರ್ಶೆ ಯನ್ನೇ ಅವರು ಬರೆಯುತ್ತಾರೆ. ವಿಶಿಷ್ಟ ಲೈಂಗಿಕ ಪದಗಳಿಂದಲೋ ಅಥವಾ ಆಂಗಿಕ ರಚನೆಗಳನ್ನು ಉಲ್ಲೇಖಿಸಿಯೋ ಪುರುಷ ವಿಮರ್ಶಕರು ಲೇಖಕಿಯರನ್ನು ಕುರಿತು ಬರೆಯುತ್ತಾರೆ. ಅದರಲ್ಲೂ ಸ್ಟೂಡೆಂಟ್ ಪ್ರೆಸ್ಸಿನ ಯುವ ವಿಮರ್ಶಕರ ಬರವಣಿಗೆ ಯಂತೂ ಎಷ್ಟೋ ಸಾರಿ ಅಶ್ಲೀಲವಾಗಿರುತ್ತದೆ. "ಮಹಿಳಾ ಬರವಣಿಗೆ" ಅಥವಾ "ಮಹಿಳೆಯರ ರೀತಿ ಬರೆಯುವುದು" ಅನ್ನುವುದರ ಹಿಂದಿರುವ ಕ್ಷುಲ್ಲಕ ಮನೋಭಾವದಿಂದಾಗಿ ಲೇಖಕಿಯರು, ತಮ್ಮನ್ನು ಮಹಿಳೆಯರೆಂದು ಕರೆಸಿಕೊಳ್ಳುವುದೇ ಕೀಳರಿಮೆ ಮತ್ತು ಅವಮಾನವೆಂದು ಭಾವಿಸುತ್ತಾರೆ.

ಪರಿಣಾಮಕಾರಿಯಾಗಿ ಲೇಖಕಿಯರನ್ನು ತಣ್ಣಗಾಗಿಸುವ

ವಿಧಾನವೆಂದರೆ, ಅವರ ಪುಸ್ತಕಗಳನ್ನು ಸುಮ್ಮನೆ ನಿರ್ಲಕ್ಷಿಸಿ ಬಿಡುವುದು. ವಿಮರ್ಶೆಗೆಂದು ಬಂದ ಈ ಪುಸ್ತಕಗಳನ್ನು ಸಂಪಾದಕರು ವಿಮರ್ಶಕರಿಗೆ ಕೊಡುವುದೇ ಇಲ್ಲ ಅಥವಾ ಪುರುಷ ವಿಮರ್ಶಕರು ವಿಮರ್ಶೆಗೆಂದು ತಮಗೆ ಬೇಕಾದ ಪುಸ್ತಕಗಳನ್ನು ಆಯ್ದುಕೊಂಡು ಈ ಪುಸ್ತಕಗಳನ್ನು ಓದಲು ನಿರಾಕರಿಸಿ ಬಿಡುತ್ತಾರೆ. ಈ ಕಾರಣದಿಂದ ಲ್ಯಾಟಿನ್ ಅಮೆರಿಕದಲ್ಲಿ ಎಷ್ಟೋ ಮಂದಿ ಉತ್ತಮ ಲೇಖಕಿಯರು ಬೆಳಕಿಗೇ ಬರುವುದಿಲ್ಲ ಎನ್ನುತ್ತಾರೆ ಮಾರ್ಜೊರಿ ಅಗೋಸಿನ್ : ಚಿಲಿಯ ಹೆಸರಾಂತ ಲೇಖಕಿ ಡೈಮಲಾ ಎಲ್ಟಿಟ್ಟರ ಪುಸ್ತಕವು ಪಟ್ಟಿ ಪಜೀತಿ ಅಷ್ಟಿಷ್ಟಲ್ಲ. ಪತ್ರಿಕೆಗಳನ್ನು ಸಂಪೂರ್ಣವಾಗಿ ತಮ್ಮ ಸ್ವಾಧೀನದಲ್ಲೇ ಇಟ್ಟುಕೊಂಡಿರುವ ಪುರುಷ ವಿಮರ್ಶಕರು ಅವರ ಪುಸ್ತಕಗಳನ್ನು ಓದಲು ನಿರಾಕರಿಸಿದರು. ಚಿಲಿಯಲ್ಲಿ ಬೇರೆ ಲೇಖಕಿಯರ ಪುಸ್ತಕಗಳನ್ನೂ ಸಹ ವಿಮರ್ಶಿಸಲು ನಿರಾಕರಿಸುತ್ತಾರೆ. ಹೆಚ್ಚು ಪ್ರಮಾಣದಲ್ಲಿ ಮಾರಾಟವಾಗುವ ಇಸಾಬೆಲ್ ಅಲೆಂಡೆಯವರ ಪುಸ್ತಕಗಳಿಗೆ ಮಾತ್ರ ವಿಮರ್ಶೆ ದೊರಕುತ್ತದೆ. ಆದರೆ ಆ ವಿಮರ್ಶೆಗಳು ಅವರು ಹಣ ಗಳಿಸಲು ಬರೆಯುತ್ತಾರೆಂದು ಯಾವಾಗಲೂ ಅವರನ್ನು ಟೀಕಿಸಿಕೊಂಡೆ ಇರುವಂಥಾದ್ದಾಗಿರುತ್ತದೆ.

ಸಾಹಿತ್ಯವನ್ನು ಮೆಚ್ಚಿ ಬರಹಗಾರರಿಗೆ ಪ್ರಶಸ್ತಿಗಳನ್ನು ಅಥವಾ ಹಿರಿಯ ಹುದ್ದೆಗಳನ್ನು ನೀಡಿ ಸಮಾಜ ಅವರನ್ನು ಸನ್ಮಾನಿಸುತ್ತದೆ. ಲಿಂಗಾಧಾರಿತ ಸೆನ್ಸಾರ್ ಇದ್ದಲ್ಲಿ, ಇಂಥಾ ಸನ್ಮಾನಗಳು ಹೆಚ್ಚಿನ ಸಂಖ್ಯೆಯಲ್ಲಿ ಮತ್ತು ಸತತವಾಗಿ ಪುರುಷರಿಗೇ ದೊರಕುತ್ತದೆ. ಲೇಖಕಿಯರ ಪುಸ್ತಕಗಳು ಉತ್ತಮ ಮಟ್ಟದ್ದಾಗಿದ್ದೂ ಎಷ್ಟೋ ಸಾರಿ ಪ್ರಶಸ್ತಿ ಗಳಿಸುವುದಿಲ್ಲ ಅಥವಾ ಪ್ರಶಸ್ತಿಗಾಗಿ ನೇಮಕವೂ ಆಗುವುದಿಲ್ಲ. ಟೋನಿಮೋರಿಸನ್ ಅವರ ಸಾಹಿತ್ಯಕ ಜೀವನದ ಅತ್ಯುತ್ತಮ ಪುಸ್ತಕವಾದ 'ಬಿಲವೆಡ್' ಹೊರಬಂದ ಕೂಡಲೆ ಅವರಿಗೆ ನೊಬೆಲ್ ಪ್ರಶಸ್ತಿ ದೊರಕಿತು. ಇದೇ ಪುಸ್ತಕಕ್ಕೆ 1987ರಲ್ಲಿ ರಾಷ್ಟ್ರೀಯ ಪುಸ್ತಕ ಪ್ರಶಸ್ತಿ ತಪ್ಪಿ ಹೋಗಿತ್ತು. ತಮ್ಮ ದೇಶದ ಓರ್ವ ಅತ್ಯುತ್ತಮ ಲೇಖಕಿ ಎಂದು ಕರೆಸಿಕೊಳ್ಳುವ ಗ್ರೇಸ್ ಪ್ಯಾಲೆ ಅವರ ಕಥಾ ಸಂಕಲನ ಕಲೆಕ್ಟೆಡ್ ಸ್ಟೋರೀಸ್‌ಗೆ 1995ರಲ್ಲಿ ರಾಷ್ಟ್ರೀಯ ಪುಸ್ತಕ ಪ್ರಶಸ್ತಿ ತಪ್ಪಿತು. ಅದೂ, ಆಗಲೇ ಒಮ್ಮೆ ಪ್ರಶಸ್ತಿಯನ್ನು ಪಡೆದಿದ್ದ ಲೇಖಕರೊಬ್ಬರ ಕಾದಂಬರಿಯ ಜೊತೆಗಿನ ಪೈಪೋಟಿಯಲ್ಲಿ. ಕಾದಂಬರಿಗೆ ಹೋಲಿಸಿದರೆ ಅತ್ಯುತ್ತಮ ಕಥೆಗಳೂ ಸಹ ಸಣ್ಣ ದರ್ಜೆಯ ಸಾಹಿತ್ಯ ಮಾಧ್ಯಮಕ್ಕೆ ಸೇರಿದ್ದಾಗುತ್ತದೆ. ಆದ್ದರಿಂದ ಕಥೆ ಮತ್ತು ಕಾಬಂದರಿಯನ್ನು ಸರಿಸಮಾನವಾಗಿ ಕಾಣಲಾಗುವುದಿಲ್ಲ ಎಂದು ತೀರ್ಪುಗಾರರು ಈ ಘಟನೆಯನ್ನು ಸಮರ್ಥಿಸಿಕೊಂಡರು. ನಾಜೂಕು, ಸಣ್ಣ, ಪೀಚು, ಹಗುರ, ಇವೆಲ್ಲ ಸಾಹಿತ್ಯ ಮಾಧ್ಯಮಗಳ ನಡುವಿನ ತಾರತಮ್ಯವೋ ಅಥವಾ ಲಿಂಗಾಧಾರಿತ ದೃಷ್ಟಿಕೋನದಲ್ಲಿ ಕಾಣುವ ತಾರತಮ್ಯವೋ?

ಸಮಾನತೆಯೇ ಮೂಲ ಉದ್ದೇಶವಾಗಿದ್ದ ಸೋವಿಯತ್ ರಷ್ಯದಲ್ಲೂ ಸಹ ಎಂದೂ ಮಹಿಳೆಯರು ಯಾವುದೇ ಪತ್ರಿಕೆಯ ಮುಖ್ಯ ಸಂಪಾದಕರಾಗಿರಲ್ಲಿಲ್ಲ, ಬರಹಗಾರರ ಒಕ್ಕೂಟದ ಮುಖಂಡರಾಗಿರಲಿಲ್ಲ ಅಥವಾ ಗೌರವಾನ್ವಿತ ಪ್ರಶಸ್ತಿಗೆ ನೇಮಕ ಗೊಂಡಿರಲಿಲ್ಲ. 1995ರಲ್ಲಿ ಲೇಖಕಿ ಲುದ್ಮಿಲ ಪೆಟ್ರೂಶ್ಕ್ಯ ನೇಮಕಗೊಂಡಿದ್ದು ಬಿಟ್ಟರೆ, ಇವತ್ತಿನವರೆಗೂ ಯಾವ ಲೇಖಕಿಗೂ ರಷ್ಯನ್ ಬುಕ್ಕರ್ ಪ್ರೈಸ್ ದೊರೆತಿಲ್ಲ. ಕೃತಿಯ ಯೋಗ್ಯತೆಯ ಆಧಾರದ ಮೇರೆಗೆ ಕೃತಿಯ ಶ್ರೇಷ್ಠತೆಯನ್ನು ನಿರ್ಧರಿಸಬೇಕು ಎಂದು ಲೇಖಕಿಯರು ನಂಬಿರುತ್ತಾರೆ. ಆಗ, ಪ್ರಶಸ್ತಿಗೆ ನೇಮಕಗೊಂಡೂ ಸಹ ಪ್ರಶಸ್ತಿ ಬಾರದಿದ್ದನ್ನು ಪುರುಷ ಸಹಪಾಟಿಗಳು ಅಪಜಯವೆಂದು ಪರಿಗಣಿಸಿದರೆ ಕಹಿಯ ಅನುಭವವಾಗುತ್ತದೆ. ಅಮ ಅತ ಆಯ್ದೂ ಅವರ ಅಭಿಪ್ರಾಯದಂತೆ, ಆಫ್ರಿಕದ ಲೇಖಕರ ಸಂದರ್ಶನವನ್ನು ಮಾಡಿ, ಆಫ್ರಿಕಾದ ಪ್ರಮುಖ ಬರಹಗಾರರನ್ನು ಹೆಸರಿಸಲು ಹೇಳಿದರೆ ಕೇವಲ ಪುರುಷರ ಹೆಸರಿನ ಪಟ್ಟಿಯನ್ನು ಕೊಡುತ್ತಾರಂತೆ. ವಿದೇಶದಲ್ಲಿ ಪ್ರಕಟವಾದ ಆಕೆಯ ಮೊದಲ ಪುಸ್ತಕ 'ಅವರ್ ಸಿಸ್ಟರ್ ಕಿಲ್ಜಾಯ್' ಮೊದಲ ಸಾರಿಗೆ ದಿಟ್ಟವಾಗಿ, ರಾಜಕೀಯ ನೆಲೆಯಿಂದ ಧ್ವನಿಯೆತ್ತಿದ ಪ್ರಶಂಸೆಗೊಳಗಾಗಿದೆ ಎನ್ನುವುದು ಸಂತೋಷ ತರುವ ವಿಷಯ. ಆದರೆ ಅದು, ಇಲ್ಲಿ, ಆಗಿರುವ ದುಃಖಕ್ಕೆ ಸಾಂತ್ವನ ತರುವುದಿಲ್ಲ. ಏಕೆಂದರೆ ನನ್ನ ಮನೆಯಲ್ಲೇ ಅದನ್ನು ತಣ್ಣಗಾಗಿಸಲಾಗಿದೆ. ನನ್ನ ಸೋದರರಿಗೆ ಖಂಡಿತ ಗೊತ್ತು, ಕಡೆಗೆ ಉಳಿಯುವುದು ಪ್ರಶಂಸೆಯಲ್ಲ ಆದರೆ ಒಂದು ಪುಸ್ತಕದ ಅಸ್ತಿತ್ವಕ್ಕೆ ಬೆಂಬಲ ನೀಡುವ ವಿಮರ್ಶಾತ್ಮಕ ಮೆಚ್ಚುಗೆ ಎನ್ನುವುದು. ಬರಹಗಾರರು, ಕಲಾವಿದರು, ಹೀಗೆ ಸೃಜನಾತ್ಮಕವಾಗಿರುವ ಪ್ರತಿಯೊಬ್ಬರೂ ಬದುಕುಳಿಯುವುದೇ ವಿಮರ್ಶಾತ್ಮಕ ವಿವಾದಗಳ ಮೂಲಕ. ಒಬ್ಬ ವಿಮರ್ಶಕ ನಿಮ್ಮ ಕೃತಿಯ ಬಗ್ಗೆ ಮಾತನಾಡಲು ನಿಕಾಕರಿಸಿದರೆ, ಅದು ದೌರ್ಜನ್ಯ. ಅವನು, ನಿಮ್ಮ ಸೃಜನಾತ್ಮಕ ವ್ಯಕ್ತಿತ್ವದ ಸಾವನ್ನು ಬಯಸುತ್ತಿದ್ದಾನೆ.

ಅಂತರರಾಷ್ಟ್ರೀಯವಾಗಿ ಹೆಸರು ಗಳಿಸಿರುವ ಮಹಿಳೆಯರನ್ನು ಸಹ ಅವರದೇ ದೇಶದಲ್ಲಿ ನಿರಾಕರಿಸಲಾಗುತ್ತದೆ. ಕ್ರಿಸ್ಟಿನ ದ ಫೋನ್ಸೆಕ ಹೇಳುವಂತೆ: ಲೇಖಕಿಯರ ಪರಿಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದು ಚರಿತ್ರೆ ಸಾಬೀತು ಪಡಿಸುತ್ತದೆ. ಇಡೀ ಲ್ಯಾಟೀನ್ ಅಮೇರಿಕಕ್ಕೇ ಮೊದಲ ಬಾರಿಗೆ ನೊಬೆಲ್ ಬಹುಮಾನವನ್ನು (1945) ತಂದುಕೊಟ್ಟ ಗೇಬ್ರಿಲ ಮಿಸ್ತ್ರಾಲ್ (1889-1957) ಚಿಲಿಯನ್ ಮಹಿಳೆ, ಎಷ್ಟೋ ವರ್ಷಗಳ

ನಂತರ ಪುರುಷನೊಬ್ಬನನ್ನು ಕುರಿತು ಅವರು ಬರೆದ ಪ್ರೇಮ ಗೀತೆಗಳಿಗೆ ಚಿಲಿಯ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ ದೊರಕಿತು. ಆದರೆ ಈಗಲೂ ಸಹ ಆಕೆಯನ್ನು ನೆನೆಯುವುದು ಅತ್ಯಂತ ಕುರೂಪಿ ಹೆಂಗಸು ಹಾಗೂ ಲೆಸ್‌ಬಿಯನ್ ಎಂದು ಮಾತ್ರ.

ಚಿಲಿ-ಅಮೇರಿಕದ ಕವಯಿತ್ರಿ ಮ್ಯಾರ್ಜೊರಿ ಅಗೊಸಿನ್ ಗಮನಿಸಿರುವಂತೆ ಸ್ತ್ರೀಪರ ದೃಷ್ಟಿಕೋನವುಳ್ಳ ಅವರು ಸ್ಪ್ಯಾನಿಷ್ ಭಾಷೆಯಲ್ಲಿ ಏನೇ ಬರೆದರೂ ಪುರುಷ ವಿಮರ್ಶಕರಿಂದ ಅಲ್ಲಗಳೆಯಲ್ಪಡುತ್ತಿತ್ತು. ಆದರೆ ಇತ್ತೀಚೆಗೆ ಆಕೆಗೆ, ಅಮೇರಿಕದಲ್ಲಿರುವ ಸ್ಪ್ಯಾನಿಷರು ಬರೆದ ಅತ್ಯುತ್ತಮ ಕೃತಿಗೆ ನೀಡಲಾಗುವ ಪ್ರತಿಷ್ಠಿತ ಪ್ರಶಸ್ತಿಯಾದ 'ಲಿಬ್ರೊ ಡಿ ಒರೊ' ದೊರಕಿದೆ. ಮೂರೂ ತೀರ್ಪುಗಾರರು ಅವರ ಕೃತಿಗಳನ್ನು ಕಟುವಾಗಿ ಖಂಡಿಸುತ್ತಿದ್ದವರಾಗಿದ್ದೂ ಈ ಪ್ರಶಸ್ತಿ ದೊರಕಿರುವುದರ ಹಿನ್ನೆಲೆ ಏನೆಂದರೆ, ಹಸ್ತಪ್ರತಿಯಲ್ಲಿ ಲೇಖಕಿಯ ಹೆಸರಿರಲಿಲ್ಲ ಮತ್ತು ವಿನ್ಸೆಂಟ್ ವ್ಯಾನ್ಗೋನ ಪಾತ್ರದ ಮೂಲಕ ಕೃತಿಯ ಚಿತ್ರಣವನ್ನು ವಿಸ್ತರಿಸಲಾಗಿತ್ತು. ವ್ಯಂಗ್ಯ ಮತ್ತು ರಾಜಕೀಯ ಟೀಕೆಗಳನ್ನೊಳಗೊಂಡ ವೆಸ್ಟ್ ಇಂಡೀಸಿನ ಸಂಗೀತ ರೂಪವಾದ ಕ್ಯಾಲಿಪ್ಸೊದಲ್ಲಿಯೂ ಇದೇ ರೀತಿಯ ಲಿಂಗಾಧಾರಿತ ಸೆನ್‌ಸಾರು ಕಂಡು ಬರುವುದನ್ನು ಮರ್ಲ್ ಹೋಡ್ಜ್ ಗಮನಿಸುತ್ತಾರೆ : ಆರಂಭದ ದಿನಗಳಲ್ಲಿ ಅಂದರೆ ಬೆಳವಣಿಗೆಯ ಹಂತಗಳಲ್ಲಿ ಕ್ಯಾಲಿಪ್ಸೊ ಮಹಿಳೆಯರ ಸ್ವತ್ತಾಗಿತ್ತು. ಕ್ರಮೇಣ ಪುರುಷ ಪ್ರಧಾನವಾಗಿ ಹೋಯ್ತು ಅನಂತರದ ತಲೆಮಾರುಗಳಲ್ಲಿ ಮಹಿಳಾ ಕ್ಯಾಲಿಪ್ಸೋನಿಯನ್ ಎಂದರೆ ಏನೋ ವಿಲಕ್ಷಣದಂತೆ ಆಗಿಹೋಯ್ತು. ಇವತ್ತು ಮಹಿಳಾ ಕ್ಯಾಲಿಪ್ಸೋನಿಯ್ನರ ಸಂಖ್ಯೆ ಸಾಕಷ್ಟು ಬೆಳೆದಿದೆ. ಕೆಲವು ವರ್ಷಗಳ ಹಿಂದೆ ನ್ಯಾಶನಲ್ ವಿಮೆನ್ಸ್ ಆಕ್ಷನ್ ಕಮಿಟಿಯೆಂಬ ಮಹಿಳಾ ಸಂಸ್ಥೆಯೊಂದು ಮಹಿಳಾ ಕ್ಯಾಲಿಪ್ಸೋನಿಯನ್ನರನ್ನು ಉದ್ಧರಿಸುವ ಪ್ರಜ್ಞಾಪೂರ್ವಕ ಕಾರ್ಯವನ್ನು ಕೈಗೆತ್ತಿಕೊಂಡಿತು. ಈ ಸಂಸ್ಥೆಯು ಮಹಿಳೆಯರಿಗಾಗಿ 'ಕ್ಯಾಲಿಪ್ಸೋಕ್ವೀನ್' ಸ್ಪರ್ಧೆಯನ್ನು ಏರ್ಪಡಿಸುತ್ತಿದೆ. ಗೆದ್ದವರನ್ನು ದೇಶದ ಅತ್ಯುತ್ತಮ ಕ್ಯಾಲಿಪ್ಸೋನಿಯನ್ ಎಂದು ಗುರುತಿಸಲ್ಪಾಗುತ್ತಿದೆ. ಇಲ್ಲಿಯವರೆಗೆ ಕೇವಲ ಒಂದೇ ಒಂದು ಸಾರಿ ಮಹಿಳೆಯೊಬ್ಬಳು ಈ ಸ್ಪರ್ಧೆಯನ್ನು ಗೆದ್ದಿದ್ದಾಳೆ. ಮಹಿಳೆಯರು ನಿರ್ಣಾಯಕ ಮಟ್ಟಕ್ಕೆ ತಲುಪುವುದೇ ಅಪರೂಪ. ತೀರ್ಪುಗಾರರು ಮಹಿಳಾ ಕ್ಯಾಲಿಪ್ಸೋನಿಯನ್ನರನ್ನು ಆಸಕ್ತಿಯಿಂದ ಕೇಳಿಸಿಕೊಳ್ಳುವುದೇಯಿಲ್ಲ. ಮಹಿಳೆಯರಲ್ಲಿ ಪುರುಷರಿಗಿಂತ ಪ್ರಬುದ್ಧವಾದ ವೃತ್ತಿಪರ ಕ್ಯಾಲಿಪ್ಸೋನಿಯನ್ನರು ಇದ್ದರೂ ಸಹ, ಅಧಿಕೃತ ಸನ್ಮಾನಗಳೆಲ್ಲವನ್ನೂ ಪುರುಷರೇ ಅನುಭವಿಸುತ್ತಾರೆ. ಮಹಿಳಾ ಕ್ಯಾಲಿಪ್ಸೋನಿಯನ್ನರು ಒಂದು ರೀತಿಯಲ್ಲಿ ಎದುರಿಗಿದ್ದೂ ಕಾಣಿಸಿಕೊಳ್ಳಲಾಗದೆ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದಾರೆ.

ಮಕ್ಕಳ ಪುಸ್ತಕಗಳನ್ನು ಹೆಚ್ಚಾಗಿ ಮಹಿಳೆಯರೇ ಬರೆಯುತ್ತಿರುವುದರಿಂದ ಈ ಸಾಹಿತ್ಯ ವಿಭಾಗವನ್ನೂ ಕೀಳಾಗಿ ಕಾಣಲಾಗುತ್ತದೆ. ಮಕ್ಕಳ ಸಾಹಿತ್ಯವನ್ನು ಕೆಲವು ವಿಶೇಷ ಸಮಯಗಳಲ್ಲಿ, ಅದೂ ಸಾಧಾರಣವಾಗಿ ತೀರಿಹೋದ ಪುರುಷ ಬರಹಗಾರರಿಗೆ ಸಂಬಂಧಿಸಿದಂತೆ ಬಿಟ್ಟರೆ ಎಲ್ಲೂ ಗಂಭೀರವಾಗಿ ಪರಿಗಣಿಸಲಾಗುವುದಿಲ್ಲ. ಚಿಲಿಯಲ್ಲಿ ಮಕ್ಕಳ ಸಾಹಿತ್ಯವನ್ನು ಸಾಹಿತ್ಯವೆಂದೇ ಪರಿಗಣಿಸಲಾಗುವುದಿಲ್ಲ. ಯಾವ ವಿಮರ್ಶಕರೂ ಅದನ್ನು ವಿಮರ್ಶಿಸುವುದಿಲ್ಲ. ಮಕ್ಕಳ ಸಾಹಿತ್ಯದ ಬಹುದೊಡ್ಡ ಕಾರ್ಯಾಗಾರವೇ ಇರುವ ಅಮೇರಿಕದಲ್ಲಿ ಸಹ, ಮಕ್ಕಳ ಸಾಹಿತ್ಯದ ಲೇಖಕರನ್ನು PENನ ಒಂದು ಅಂಗವಾಗಿ ಪರಿಗಣಿಸುವುದಕ್ಕೆ ವಿರೋಧವಿತ್ತು.

ಮಹಿಳೆಯರನ್ನು ಬಾಯಿ ಮುಚ್ಚಿಸುವ ಹಳೇ ತಂತ್ರಗಳು ಯಾವುವು ಈಗ ಮೊದಲಿನಂತೆ ಯಶಸ್ವಿಯಾಗಿ ಕೆಲಸ ಮಾಡುತ್ತಿಲ್ಲ. ಮಹಿಳಾ ಆಂದೋಲನಗಳ ಪ್ರಭಾವದಿಂದ ಹಾಗೂ ಪರ್ಯಾಯ ಪ್ರೆಸ್ ಮತ್ತು ಪತ್ರಿಕೆಗಳ ಬೆಂಬಲದಿಂದ ಎಷ್ಟೇ ತೊಡಕುಗಳು ಎದುರಾದರೂ ಕೂಡ ಮಹಿಳೆಯರು ಇತ್ತೀಚೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬರೆಯುತ್ತಿದ್ದಾರೆ ಮತ್ತು ಪ್ರಕಟಿಸುತ್ತಿದ್ದಾರೆ. ಆದ್ದರಿಂದ ಮಹಿಳೆಯರನ್ನು ಅವರ ಜಾಗದಲ್ಲಿಡಬೇಕೆಂದು ಬಯಸುವ ಸಂಪ್ರದಾಯವಾದಿಗಳು ಈಗ ಹೊಸ ಪ್ರಕಾರದ ಸೆನ್ಸಾರಿನ ಕಡೆಗೆ ಹೊರಳಬೇಕಾಗಿದೆ. ಈಗ ಅಮೇರಿಕಾದಲ್ಲಿ ಬಿಡಿಬಿಡಿ ಗುಂಪುಗಳು ಸ್ವೇಚ್ಛೆಯಿಂದ ಸೆನ್ಸಾರಿನ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಉದ್ಯಮ ಪ್ರಚಾರದಲ್ಲಿದೆ. ಇವರು ವಿಮರ್ಶಕರ ಹಾಗಲ್ಲ, ಇವರಿಗೆ ಮಕ್ಕಳ ಸಾಹಿತ್ಯದ ಮಹತ್ವ ಗೊತ್ತಿದೆ. ಲೈಂಗಿಕ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಸಾಮಗ್ರಿಗಳು ಹಾಗೂ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರಶ್ನಿಸುವ ಕಥೆಗಳನ್ನು ಶಾಲೆಗಳಿಂದ ಹಾಗೂ ಸಾರ್ವಜನಿಕ ಗ್ರಂಥಾಲಯಗಳಿಂದ ಹೊರಗಿಡಬೇಕೆಂದು ಪ್ರತೀ ವರ್ಷವೂ ಕ್ರೈಸ್ತ ಸಂಪ್ರದಾಯವಾದಿಗಳು ರಾಷ್ಟ್ರಮಟ್ಟದಲ್ಲಿ ಗುಲ್ಲೆಬ್ಬಿಸುತ್ತಿದ್ದಾರೆ.

○

(ಆಧಾರ : 'What do we Mean by Gender-based Censorship?' The Power of the Word : Culture, Censorship, and Voice. New York : Women's World 1995)

# ಲಿಂಗಾಧಾರಿತ ಸೆನ್ಸಾರ್‌ಶಿಪ್ ಕುರಿತ ಕಮ್ಮಟ

*ಒಂದು ವರದಿ*

ಮೇ ತಿಂಗಳ 12, 13, 14ರಂದು ಮೈಸೂರಿನಲ್ಲಿ ಲಿಂಗಾಧಾರಿತ ಸೆನ್ಸಾರ್‌ಶಿಪ್ ಕುರಿತ ಕಮ್ಮಟವನ್ನು ಏರ್ಪಡಿಸಲಾಗಿತ್ತು. 1996ರಲ್ಲಿ ಬಾಂಗ್ಲಾದೇಶದಲ್ಲಿ ತಸ್ಲಿಮಾ ನಸ್‌ರಿನ್‌ಳ ಪುಸ್ತಕ ನಿಷೇಧದ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಒಕ್ಕೂಟವೊಂದು ಅಸ್ತಿತ್ವಕ್ಕೆ ಬಂತು. ಒಕ್ಕೂಟ ಬರಹಗಾರರು, ಪ್ರಕಾಶಕರು, ಪತ್ರಕರ್ತರು, ಮುದ್ರಕರನ್ನೊಳಗೊಂಡಿದೆ. ಮಹಿಳಾ ಬರಹಗಾರರನ್ನು ಕುರಿತು ಅನೇಕ ಕಾರ್ಯಕ್ರಮಗಳನ್ನು ಒಕ್ಕೂಟವೂ ಹಮ್ಮಿಕೊಂಡಿದೆ. ಲಿಂಗಾಧಾರಿತ ಸೆನ್ಸಾರ್‌ಶಿಪ್ ಕುರಿತಂತೆ ಜಗತ್ತಿನ ಹಲವೆಡೆ ಕಮ್ಮಟಗಳನ್ನು ಏರ್ಪಡಿಸಿ ಬರಹಗಾರರ ಅನುಭವಗಳನ್ನು ದಾಖಲಿಸಿ ವಿಶ್ಲೇಷಿಸುವ ಹಾಗು ಮಹಿಳಾ ಬರಹಗಾರರ ಸಮಸ್ಯೆಗಳನ್ನು ಎದುರಿಸಲು ಒಂದು ನೆಟ್‌ವರ್ಕ್‌ಅನ್ನು ಕಟ್ಟುವುದು ಒಕ್ಕೂಟದ ಒಂದು ಕಾರ್ಯಕ್ರಮವಾಗಿದೆ. ನಮ್ಮ ದೇಶದ ಕಾಲಿಫಾರ್ ವುಮೆನ್‌ನ ರಿತು ಮೆನನ್ ಅವರು ಒಕ್ಕೂಟದಲ್ಲಿ ಕೆಲಸ ಮಾಡುತ್ತಿದ್ದಾರೆ. ಲಿಂಗಾಧಾರಿತ ಸೆನ್ಸಾರ್‌ಶಿಪ್ ಕುರಿತ ಕಮ್ಮಟವನ್ನು ಮರಾಠಿ, ಹಿಂದಿ, ಮಲಯಾಳಂ, ಗುಜರಾತಿ ಲೇಖಕಿಯರೊಂದಿಗೆ ನಡೆಸಲಾಗಿದ್ದು ಕನ್ನಡ ಲೇಖಕಿಯರಿಗಾಗಿ ಕಮ್ಮಟವನ್ನು ಮೈಸೂರಿನಲ್ಲಿ ಗ್ರೀನ್ ಹೋಟೆಲ್‌ನಲ್ಲಿ ನಡೆಸಲಾಗಿತ್ತು. ಬೆಂಗಳೂರಿನ ಪತ್ರಕರ್ತೆ ಅಮ್ಮು ಜೋಸೆಫ್ ಅವರು ಕಮ್ಮಟದ ವ್ಯವಸ್ಥೆಯನ್ನು ಮಾಡಿದ್ದರು. ಕಮ್ಮಟದಲ್ಲಿ ವ್ಯವಸ್ಥಾಪಕರನ್ನೊಳಗೊಂಡಂತೆ 25 ಜನ ಭಾಗವಹಿಸಿದ್ದರು.

ದಿನಾಂಕ 12ರಂದು ಪರಸ್ಪರ ಪರಿಚಯಿಸಿಕೊಳ್ಳುವುದರ ಜೊತೆಗೆ ಲಿಂಗಾಧಾರಿತ ಸೆನ್ಸಾರ್‌ಶಿಪ್ ಲೇಖನ ಕುರಿತು ಚರ್ಚಿಸಲಾಯಿತು. ಸ್ವಸೆನ್ಸಾರ್‌ಶಿಪ್‌ಅನ್ನು ಕುರಿತು ಹೆಚ್ಚಿನ ಚರ್ಚೆಯಾಯಿತು. ತಮಗನಿಸಿದ್ದೆಲ್ಲವನ್ನು ಪ್ರಾಮಾಣಿಕವಾಗಿ ಬರೆಯಲು ಸಾಧ್ಯವಾಗಿಲ್ಲ. ಕುಟುಂಬದ ಒತ್ತಡವೊ, ಸಮಾಜದ ಒತ್ತಡವೊ, ಧರ್ಮ, ಕೋಮಿನ ಒತ್ತಡವೊ ಹಿಂದೆ ಕೆಲಸ ಮಾಡುತ್ತಿರುತ್ತದೆ. ಬರೆಯಲೇಬೇಕೆಂಬ ಅನಿವಾರ್ಯತೆ ಬಂದಾಗ ಅಭಿವ್ಯಕ್ತಿಸಲು ಕಾವ್ಯಪ್ರಕಾರ ಸೂಕ್ತವೆನಿಸಿದೆ. ಆತ್ಮಚರಿತ್ರೆಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಿಲ್ಲ. ನಮ್ಮ ಬದುಕಿನ ಬಗ್ಗೆಯೇ ಕುರಿತು ಬರೆಯುವಾಗ ಹತ್ತಿರದವರಿಗೆ ನೋವುಂಟು ಮಾಡುವವೇನೊ ಎಂಬ ಅಳುಕು ಕಾಡುತ್ತದೆ. ಈ ಕಾರಣಕ್ಕಾಗಿಯೆ ಆತ್ಮಚರಿತ್ರೆಗಳು ಸಾಧ್ಯವಾಗಿಲ್ಲ, ಎಂಬ ಅಭಿಪ್ರಾಯಗಳು ಬಂದವು.

13ನೇ ತಾರೀಖಿನಂದು ಬರೆಯಲು ಆರಿಸಿಕೊಳ್ಳುವ ಪ್ರಕಾರಗಳು, ಬರೆಯಲು ಆರಿಸಿಕೊಳ್ಳುವ ವಸ್ತು, ಸಮಯ, ಬದುಕು, ಬರವಣಿಗೆಯಲ್ಲಿ ನಮ್ಮ ಮೇಲಾದ ಪ್ರಭಾವಗಳು, ಬರಹಗಳ ಕುರಿತ ವಿಮರ್ಶೆ, ಪ್ರಕಟಣೆ ಕುರಿತ ಸಮಸ್ಯೆಗಳು ಇತ್ಯಾದಿಯನ್ನು ಕುರಿತು ಹಂಚಿಕೊಳ್ಳಲಾಯಿತು. ತಮ್ಮ ಬರವಣಿಗೆ ಮೇಲೆ ಬೀರಿದ ಪ್ರಭಾವ ಕುರಿತಂತೆ ಹೆಚ್ಚಿನ ಲೇಖಕಿಯರು ತಮ್ಮ ಬಾಲ್ಯ, ಅದರ ಸುತ್ತ ಹೆಣೆದುಕೊಂಡ ಸಂಬಂಧಗಳು, ಪರಿಸರ ಕುರಿತು ಮಾತನಾಡಿದರು. ಮಹಿಳೆಯರ ಬರಹಗಳು ಸರಿಯಾಗಿ ವಿಮರ್ಶಿಸಲ್ಪಟ್ಟಿಲ್ಲ ಮತ್ತು ಅವರ ಕೃತಿಗಳಿಗೆ ಸಿಗಬೇಕಾದ ಆದ್ಯತೆ ಸಿಕ್ಕಿಲ್ಲವೆಂದು ಅಭಿಪ್ರಾಯ ಪಡಲಾಯಿತು. ಒತ್ತಡಗಳ ನಡುವೆಯು ಕೆಲವರು ದಿಟ್ಟವಾಗಿ ಬರೆಯುವ ಪ್ರಯತ್ನ ಮಾಡಿದ್ದಾರೆ. ಲೇಖಕರಿಗಿಂತ ನಮ್ಮ ಸ್ಥಿತಿ ಭಿನ್ನವಾಗಿರುತ್ತದೆ. ಪುರುಷರ ಲೇಖಕರ ಕೃತಿಗಳನ್ನು ಅವರ ವೈಯಕ್ತಿಕ ಬದುಕಿನೊಂದಿಗೆ ತಳುಕು ಹಾಕಿ ನೋಡುವುದಿಲ್ಲ. ಇದು ಲೇಖಕಿಯರ ವಿಷಯದಲ್ಲಿ ಸಾಧ್ಯವಾಗುವುದಿಲ್ಲ. ಕೆಲವೊಮ್ಮೆ ಪುರುಷ ಲೇಖಕರು ನಮ್ಮ ಕೃತಿಗಳನ್ನು ಓದಿ, ಮೆಚ್ಚುಗೆ ವ್ಯಕ್ತಪಡಿಸುವುದುಂಟು ಪ್ರೋತ್ಸಾಹಿಸುವುದುಂಟು. ಆದರೆ ಅದು ದಾಖಲಾಗದೆ ವೈಯಕ್ತಿಕ ಮಟ್ಟದಲ್ಲೇ ಉಳಿದುಬಿಡುತ್ತದೆ.

14ನೇ ತಾರೀಖಿನಂದು - ಹಿಂದಿ, ಮಲೆಯಾಳಿ, ಗುಜರಾತಿ, ಮರಾಠಿ ಲೇಖಕಿಯರ ಕಮ್ಮಟದ ಅನುಭವವನ್ನು ವ್ಯವಸ್ಥಾಪಕರು ಸಂಕ್ಷಿಪ್ತವಾಗಿ ತಿಳಿಸಿದರು. ಹಿಂದಿ ಭಾಷೆಯು ರಾಷ್ಟ್ರಭಾಷೆಯಾಗಿರುವುದರಿಂದ ಅವರಿಗೆ ಹೆಚ್ಚಿನ ಓದುಗರಿದ್ದಾರೆ. ಪ್ರಕಟಣೆಯು ಹೆಚ್ಚಿನ ಸಮಸ್ಯೆಯಾಗಿಲ್ಲ. ಹಿಂದಿ ಲೇಖಕಿಯರು ತಮ್ಮನ್ನು ಹೆಚ್ಚು ಮುಖ್ಯವಾಹಿನಿಯ ಲೇಖಕರೊಂದಿಗೆ ಗುರುತಿಸಿಕೊಳ್ಳಲು ಇಷ್ಟಪಡುತ್ತಾರೆ. ಹಿಂದಿ ಲೇಖಕಿಯರಲ್ಲಿ ಎರಡೆರಡೂ ಭಾಷೆಯಲ್ಲಿ, ಎರಡೆರಡು ಪ್ರಕಾರಗಳಲ್ಲಿ ಬರೆಯುವವರು ಸಂಖ್ಯೆ ಹೆಚ್ಚು.

ಕೇರಳದಲ್ಲಿ - ಎಡಪಂಥೀಯ ಚಳುವಳಿಯ ಪ್ರಭಾವ ಬೇರೆಲ್ಲವನ್ನು ಅಮುಖ್ಯಗೊಳಿಸಿದೆ. ಲೇಖಕಿಯರ ಸಂಖ್ಯೆ ಅಲ್ಲಿ ತುಂಬಾ ಕಡಿಮೆ.

ಗುಜರಾತಿ, ಮರಾಠಿ ಕಮ್ಮಟಗಳನ್ನು ಒಟ್ಟಿಗೆ ನಡೆಸಲಾಯ್ತು. ಲೇಖಕಿಯರು ಸಕ್ರೀಯವಾಗಿ ಪಾಲ್ಗೊಂಡು ತಮ್ಮ ಅನುಭವಗಳನ್ನು

ಹಂಚಿಕೊಂಡಿದ್ದಾರೆ. ಮರಾಠಿಯಲ್ಲಿ ಆತ್ಮಚರಿತ್ರೆಗಳು ಹೆಚ್ಚಾಗಿ ಪ್ರಕಟಗೊಂಡಿವೆ. ಇತ್ತೀಚಿನ ಸಮಯದಲ್ಲಿ ಕಡಿಮೆಯಾಗಿದೆ. ಇದಕ್ಕೆ ಅವರು ನೀಡಿದ ಕಾರಣವೆಂದರೆ - ಹಿಂದೆ ಮಹಿಳೆಯರ ಆತ್ಮಚರಿತ್ರೆಯನ್ನು ಓದುವವರ ಸಂಖ್ಯೆ ತುಂಬಾ ಕಡಿಮೆಯಿತ್ತು. ಈಗ ಓದುಗರ ಸಂಖ್ಯೆ, ಮುದ್ರಣದ ಸಂಖ್ಯೆ ಹೆಚ್ಚಾಗಿರುವುದರಿಂದ ಬರೆದರೆ ತಮ್ಮ ಹತ್ತಿರದವರಿಗೆ ನೋವುಂಟಾಗಬಹುದು; ತಮ್ಮ ವೈಯಕ್ತಿಕ ಬದುಕು ತೊಂದರೆಗೊಳಗಾಗಬಹುದೆಂಬುದು. ನಮ್ಮ ಸೃಜನಶೀಲತೆ ನಮ್ಮ ಮನೆಯ ಹೊರಗಿನದಕ್ಕೆ ಸೀಮಿತವಾಗಿರುತ್ತದೆ. ಲೇಖಕಿಯೊಬ್ಬರು ಕಮ್ಮಟದಲ್ಲಿ ಹೀಗೆಂದಿದ್ದಾರೆ - "ನಮ್ಮ ಸೃಜನಶೀಲತೆ ಮಳೆಕೋಟಿನಂತೆ ಮನೆಗೆ ಬಂದ ಕೂಡಲೆ ಅದನ್ನು ಬಾಗಿಲಬಳಿ ನೇತುಹಾಕಿಬಿಡುತ್ತೇವೆ". ಪ್ರಾಮಾಣಿಕವಾಗಿ, ದಿಟ್ಟವಾಗಿ ಬರೆಯಲು ವೇಶ್ಯೆಯಾಗಿದ್ದರೆ, ತುಳಿಯಲ್ಪಟ್ಟಿದ್ದರೆ ಮಾತ್ರ ಸಾಧ್ಯವಾಗಬಹುದೇನೊ ಎಂಬುದು ಮತ್ತೊಬ್ಬ ಲೇಖಕಿಯ ಅಭಿಪ್ರಾಯವಾಗಿತ್ತು.

ಕನ್ನಡ ಲೇಖಕಿಯರ, ಮುದ್ರಕರ ಒಂದು ನೆಟ್‌ವರ್ಕ್‌ಅನ್ನು ಬಲಗೊಳಿಸುವ ಅಗತ್ಯವಿದೆ. ಆ ನಿಟ್ಟಿನಲ್ಲಿ ಈಗಾಗಲೆ ಇರುವ ಕರ್ನಾಟಕ ಲೇಖಕಿಯರ ಸಂಘದಂತಹ ಸಂಸ್ಥೆಗಳು ಕೆಲಸ ಮಾಡಬೇಕು. ಬೇರೆ ಭಾಷೆಗಳ ಲೇಖಕಿಯರೊಂದಿಗಿನ ಸಂವಾದವು ತುಂಬಾ ಮುಖ್ಯ. ಅವರ ಕೃತಿಗಳನ್ನು ಕನ್ನಡಕ್ಕೆ ತರುವ ಪ್ರಯತ್ನವಾಗಬೇಕು. ನಮ್ಮ ಅನುಭವ, ಬರವಣಿಗೆಯನ್ನು ಹಂಚಿಕೊಳ್ಳುವ, ಪರಸ್ಪರ ಚರ್ಚೆ ನಡೆಸುವ ಸಭೆಗಳಾಗಬೇಕು. ನಮ್ಮ ಬರವಣಿಗೆಯಲ್ಲಿ ಜಾತಿ, ವರ್ಗದ ಅಂಶ ಕುರಿತು ಚರ್ಚೆ ಮಾಡಬೇಕು. ನಮ್ಮ ಮೇಲಿನ ಪ್ರಭಾವಗಳನ್ನು ಹಿಂತಿರುಗಿ ನೋಡಿಕೊಂಡು ವಿಮರ್ಶಿಸಿಕೊಳ್ಳುವುದು ಬರಹಗಾರರಿಗೆ ತುಂಬಾ ಮುಖ್ಯ. ನಮ್ಮ ಬರವಣಿಗೆಯಲ್ಲಿ ಪ್ರಧಾನವಾಗಿರುವ ಕುಟುಂಬ, ಗಂಡು ಹೆಣ್ಣಿನ ಸಂಬಂಧದಂತಹ ವಿಷಯವಲ್ಲದೆ ವಿಭಿನ್ನವಾದ ದನಿಯನ್ನು ಹಿಡಿಯುವ ಪ್ರಯತ್ನವನ್ನು ಮಾಡಬೇಕು, ಎಂಬ ಅಭಿಪ್ರಾಯಗಳು ಬಂದವು.

***ಸರಸ್ವತಿ ದು.***

# ಅವನನ್ನೇನು ಅಷ್ಟು ಕೇಳೋದು

ಬೆಂಗಳೂರಿಗೆ ಕೆಲವೇ ಮೀಟರ್ ದೂರವಿರುವ ಗ್ರಾಮ. ಕೇಂದ್ರ ಸರ್ಕಾರದ ಯೋಜನದಡಿಯಲ್ಲಿ ಪುರುಷರು ಮುಂದೆ ನಿಂತು ಹೆಣ್ಣುಮಕ್ಕಳಿಗೆ ಹಾಲಿನ ಡೈರಿ ಪ್ರಾರಂಭ ಮಾಡಿಕೊಟ್ಟಿದ್ದಾರೆ. ಬೆಂಗಳೂರು ನಗರಕ್ಕೆ ಇಷ್ಟು ಸಮೀಪವಿದ್ದರೂ, ಈ ಗ್ರಾಮವನ್ನು ನೋಡಿದರೆ ಯಾವುದೋ ಕುಗ್ರಾಮಕ್ಕೆ ಹೋದಂತೆನಿಸುತ್ತದೆ. ವ್ಯವಸಾಯವನ್ನು ಮಾಡುವ ಬಹುಪಾಲು ಕುಟುಂಬದಲ್ಲಿನ ಹೆಣ್ಣುಮಕ್ಕಳು ಅನಕ್ಷರಸ್ಥರು.

ಹಾಲಿನ ಸಂಘದ ಮಹಿಳೆಯರಲ್ಲಿ ಇಪ್ಪತ್ತು ಜನ ಹೆಣ್ಣುಮಕ್ಕಳು ಸ್ವಸಹಾಯ ಗುಂಪನ್ನು ರಚಿಸಿಕೊಂಡು, ಒಂದು ಸಂಘಟನೆಯ ಪ್ರಯತ್ನವನ್ನು ಮಾಡುತ್ತಿದ್ದರು. ಗುಂಪಿನ ಲೆಕ್ಕ ಪುಸ್ತಕ ಬರೆಯಲು ಹಾಗೂ ಗುಂಪಿನ ಹೆಸರಿನಲ್ಲಿ ಬ್ಯಾಂಕ್‌ನಲ್ಲಿ ಖಾತೆ ತೆರೆಯಲು ಅಕ್ಷರ ಬರುವ ಮೂವರು ಮಹಿಳೆಯರನ್ನು ಆಯ್ಕೆ ಮಾಡಲಾಯಿತು. ಅದರಲ್ಲಿ ಒಬ್ಬ ಮಹಿಳೆಯನ್ನು ಎಲ್ಲರೂ ಒಮ್ಮತದಿಂದ, ಒಕ್ಕೊರಲಿನಿಂದ ಸೂಚಿಸಿದರು. ಕಾರಣ ಆಕೆ ಎಸ್.ಎಸ್.ಎಲ್.ಸಿ ಪಾಸು ಮಾಡಿದ್ದಳು. ಹಾಗಾಗಿ ಆಕೆ ಲೆಕ್ಕ ಪುಸ್ತಕಗಳನ್ನು ಸುಲಭವಾಗಿ ಬರೆಯಬಹುದೆಂಬುದು ಅವರ ಅಭಿಲಾಷೆಯಾಗಿತ್ತು.

ಎಸ್.ಎಸ್.ಎಲ್.ಸಿ ಓದಿದ ಈಕೆ ಜಯಮ್ಮ ವಯಸ್ಸಿನಲ್ಲಿ ಇನ್ನು ಚಿಕ್ಕವಳು ಅವಳಿಗಿಬ್ಬರು ಅವಳಿ-ಜವಳಿ ಮಕ್ಕಳು. ಆಕೆಯ ಹೆಸರನ್ನು ಉಳಿದವರು ಸೂಚಿಸಿದಾಗ ಆಕೆಗೆ ತನ್ನ ಓದಿನ ಬಗ್ಗೆ ತುಂಬಾ ಹೆಮ್ಮೆಯೆನಿಸಿತು. ಪುಸ್ತಕಗಳನ್ನು ಬರೆಯಲು ಸುಲಭವಾಗಿ ಒಪ್ಪಿಕೊಂಡಳು. ಅವಳಿಗಿರುವ ಅವಳಿ-ಮಕ್ಕಳೋ ಪ್ರಚಂಡರು. ಅವುಗಳನ್ನು ಸುಧಾರಿಸಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಅವು ಬೇರೆಯವರ ಬಳಿ ಹೋಗುತ್ತಿರಲಿಲ್ಲ. ಆಕೆ ಮೀಟಿಂಗ್‌ಗೆ ಬಂದಾಗಲೆಲ್ಲಾ ಅವಳ ಸೆರಗು ಹಿಡಿದುಕೊಂಡು ಓಡಿ ಬರುತ್ತಿದ್ದವು. ಅವಳು ಬರೆಯ ತೊಡಗಿದರೆ, ಅವಳ ಬೆನ್ನು ಮೇಲೆ ಬಿದ್ದು ಬರೆಯಲು ಬಿಡುತ್ತಿರಲಿಲ್ಲ. ಬೇರೆಯವರು ಕರೆದುಕೊಳ್ಳುವ ಪ್ರಯತ್ನವೆಲ್ಲಾ ವಿಫಲವಾಗಿ, ಅವುಗಳನ್ನು ಕೊಸರಿಕೊಂಡು ಆಕೆ ಬರೆಯಲು ಪ್ರಯತ್ನಿಸುತ್ತಿದ್ದಳು.

ಜಯಮ್ಮ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಬರೆದದ್ದೆ ಕೊನೆ. ಆಮೇಲೆ ಪೆನ್ನು ಹಿಡಿದು ಬರೆಯುವ ಪ್ರಸಂಗವೇ ಬರಲಿಲ್ಲ. ಮೊದಮೊದಲು ಪೆನ್ನು ಹಿಡಿದು ಬರೆಯಲು ಅಳುಕೆನಿಸಿ, ಅಕ್ಷರಗಳು ಮರೆತು ಹೋದಂತೆನಿಸುತ್ತಿದ್ದವು.

ಬರೆದದ್ದನ್ನು ಕಾಟು ಹಾಕಿ, ಹಾಕಿ ಬರೆಯಲು ಪ್ರಯತ್ನಿಸುತ್ತಿದ್ದಳು. ಕ್ರಮೇಣ ತಪ್ಪುಗಳು ಕಡಿಮೆಯಾಗತೊಡಗಿದವು. ಅವಳಿಗೂ ತಾನು ಬರೆಯಬಲ್ಲೆನೆಂಬ ವಿಶ್ವಾಸ ದೃಢವಾಗ ತೊಡಗಿತು.

ಬ್ಯಾಂಕ್ ಖಾತೆ ತೆರೆಯಲು ಈ ಮೂವರು ಫೋಟೋ ತೆಗೆಸಿಕೊಂಡಿದ್ದರು. ಜಯಮ್ಮನಿಗೆ ಹಿಂದಿನ ದಿನವೇ ಬೆಳಿಗ್ಗೆ ಜಾಗ್ರತೆಯಾಗಿ ರೆಡಿಯಾಗುವಂತೆ ತಿಳಿಸಿ ಬಂದಿದ್ದರು. ಉಳಿದಿಬ್ಬರು, ಅಕ್ಷರ ಬರೆಯ ಬಲ್ಲರಾಗಿದ್ದರೂ, ಬರೆಯುವುದು ಬಿಟ್ಟು ಸುಮಾರು 15-16 ವರ್ಷಗಳೇ ಕಳೆದಿದ್ದವು : ಆದರೆ, ಅವರಲ್ಲಿ ಉತ್ಸಾಹಕ್ಕೇನು ಕೊರತೆ ಇರಲಿಲ್ಲ. ಮನೆಯಲ್ಲಿ ರೇಷ್ಮೆ ಹುಳುವಿದ್ದರೂ ಹೊತ್ತುಮೂಡುವ ಮೊದಲೇ ಎದ್ದು, ಮನೆಗೆಲಸ ಮುಗಿಸಿ, ಜಯಮ್ಮನನ್ನು ಕರೆದುಕೊಂಡು ಬ್ಯಾಂಕಿಗೆ ಹೊರಡಲು ಆಕೆಯ ಮನೆಗೆ ಹೋದರು.

ಜಯಮ್ಮನ ಮನೆಯ ಪಡಸಾಲೆಗೆ ಹೋಗಿ ಎಷ್ಟು ಹೊತ್ತು ನಿಂತರೂ ಜಯಮ್ಮ ಈಚೆ ಬರಲಿಲ್ಲ. ಜಯಮ್ಮನ ಮಾವ, ಕುಂತ್ಕಾಳ್ರಿ ತಾಯಿ ಅವಳೇನೊ ಇನ್ನು ರೆಡಿಯಾದಂಗಿಲ್ಲ. ಬರ್ತಾಳೋ ಇಲ್ವೊ, ಅವಳ ಗಂಡ, ನಿನಗೆ ಊರಿನ ಉಸಾಬರಿ ಏಕೆ ಅಂತಿದ್ದ. ಈ ಊರಿನ ಜನ ಸರಿ ಇಲ್ಲ. ನೀನು ಬ್ಯಾಂಕಿಗೂ ಹೋಗ್ಬೇಡ, ಎಲ್ಲಿಗೂ ಬ್ಯಾಡ, ಇವೆಲ್ಲಾ ನಮಗೇಕೆ ಎಂದು ಹೇಳುತ್ತಿದ್ದ. ಇರ್ರಿ ನಾನೇ ಕರೀತೀನಿ ಅಂತ, ಜಯಮ್ಮ, ಜಯಮ್ಮ ಅಂತ ಒಳಗೆ ಕೂಗಿಕೊಂಡು ಹೋಗುತ್ತಿದ್ದ ಹಾಗೆ, ಜಯಮ್ಮ ಸೆರಗಿಗೆ ಕೈಒರೆಸಿಕೊಳ್ಳುತ್ತಾ ಹೊರಬಂದಳು. ಅವಳ ಕಣ್ಣು ಕೆಂಪಗಾಗಿದ್ದವು. ನಮ್ಮ ಮನೆಯವರು ಏನು ಹೇಳಿದ್ರು ಒಪ್ಪುತ್ತಿಲ್ಲ! ಅವ್ರು ಬೇಡ ಅಂದ್ರೆ ಒಂದೇ ಮಾತು. ನೀನು ಹೋಗೋದು ಬೇಡ ಅಂತ ಹೇಳಿದಾರೆ. ನಾನೇನು ಮಾಡ್ಲಿ ಹೇಳ್ರಿ. ಅವರ ಮಾತನ್ನ ಮೀರಿ ನಾನು ಬರಕಾಯ್ತದಾ? ಎಂದು ಅಸಹಾಯಕಳಾಗಿ ಕೈ ಚೆಲ್ಲಿದಳು.

ಈಗ ಏನು ಮಾಡುವುದು ಅದರಲ್ಲಿ ನಿನ್ನ ಹೆಸರನ್ನು ಬರೆದಿದೆ. ಈಗ ಅದನ್ನು ಬದಲಾಯಿಸಲು ಫೋಟೋ ಬೇರೆ ಬೇರೆಯವರ ಬಳಿ ಇಲ್ಲ. ನಿನ್ನ ಗಂಡನ್ನ ನಾವೇ ಕೇಳ್ತೀವಿ. ಅವನು ಒಪ್ಪಿದರೆ ನೀನು ಬರ್ಬೇಕು. ಕರೀ ಅವನ್ನ ಅಂದ್ರು. ಗಂಡ ಮನೆಯಲ್ಲಿರಲಿಲ್ಲ. ಸುಮಾರು ಒಂದು ಕಿಲೋಮೀಟರ್ ದೂರದ ಬಂಡೆಯ ಬಳಿ ಕಣ ಮಾಡಿಸುತ್ತಿದ್ದ. ಏನು ಮಾಡುವುದೆಂದು ಅವರಿಬ್ಬರೂ ತಮ್ಮಲ್ಲೆ ಮಾತಾಡಿಕೊಂಡು, ಇವತ್ತು ಬಿಟ್ರೆ ಇನ್ನು ಆಗಲ್ಲ. ಗುಂಪಿನ ಹಣವನ್ನು ತುಂಬಾ ದಿನ ನಮ್ಮ ಕೈಯಲ್ಲಿ ಇಟ್ಟುಕೊಳ್ಳುವುದು ಸರಿಯಲ್ಲ. ಹೇಗೂ ರೆಡಿಯಾಗಿ ಬಂದಿದ್ದೀವಿ. ಅವಳ ಗಂಡನ್ನ ಕೇಳಿಕೊಂಡು ಅವಳನ್ನು ಕರೆದುಕೊಂಡು ಹೋಗಿ ಬ್ಯಾಂಕ್ ಖಾತೆ ತೆರೆದು ಹಣ ಹಾಕಿ ಬಂದುಬಿಡೋಣ, ಎಂದು ತೀರ್ಮಾನಿಸಿ, "ನಾವು ಅವನ್ನ ಕೇಳಿಕೊಂಡು ಬರ್ತೀವಿ ನೀನು ಅಷ್ಟರಲ್ಲಿ ರೆಡಿಯಾಗಿರು ಎಂದು ಹೇಳಿ, ಒಳದಾರಿಯಲ್ಲಿ ಬಂಡೆಯ ಬಳಿ ನಡೆದರು.

ನೆತ್ತಿಯ ಮೇಲೆ ಬಿಸಿಲು ಕಾಯುತ್ತಿತ್ತು. ಈ ಇಬ್ಬರು ಹೆಂಗಸರು ತಲೆಯ ಮೇಲೆ ಸೆರಗು ಹಾಕಿಕೊಂಡು, ಜಯಮ್ಮನ ಗಂಡನನ್ನು ತಮಗೆ ತಿಳಿದಿರುವ ತರ್ಕದಿಂದ ಒಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಈ ಗುಂಪು ಮಾಡಿರುವುದು ನಮ್ಮ ಗ್ರಾಮದ ಮಹಿಳೆಯರ ಒಳ್ಳೆಯದಕ್ಕೆ, ಇದು ಕೇವಲ ನಮ್ಮ ಮೂರು ಜನರ ಜವಬ್ದಾರಿಯಲ್ಲ, ಇದನ್ನು ನೋಡಲು ಆಗಾಗ ಡೈರಿ ಅಧಿಕಾರಿಗಳು ಬರುತ್ತಾರೆ, ಹೀಗೆ ಎಷ್ಟು ಹೇಳಿದರು ಅವನದು ಒಂದೇ ಹಟ ಇಲ್ಲ. ನಮಗಿದೆಲ್ಲಾ ಬೇಡ, ನಾನು ಅವಳನ್ನು ಅಲ್ಲಿಗೆ ಕಳಿಸಲ್ಲ, ನೀವು ಬೇಕಾದ್ರೆ ಹೋಗಿ, ಅವಳನ್ನು ಮಾತ್ರ ಕಳಿಸಲ್ಲ, ಗುಂಪಿಗೆ ಬೇಕಾದ್ರೆ, 20 ರೂಪಾಯಿಯಲ್ಲ ನಲವತ್ತು ಕಟ್ತೋಣ, ಅವಳನ್ನು ಬ್ಯಾಂಕ್‌ಗೆ ಅಲ್ಲಿ, ಇಲ್ಲಿ ಮಾತ್ರ ಕಳಿಸೋಕೆ ಆಗೋಲ್ಲ. ನಮ್ಮ ಮನೆಯಲ್ಲಿ ಕೆಲಸ ಜಾಸ್ತಿ. ತನ್ನ ಪಟ್ಟು ಬದಲಾಯಿಸಲೇ ಇಲ್ಲ. ಬಂಡೆ ಮೇಲೆ ನಿಂತಿರೊ ಅವನ ಜೊತೆ ಈ ಹೆಂಗಸರು ತಲೆ ಎತ್ತಿ ಮಾತಾಡಿ ಕತ್ತು ನೋವೇ ಬಂತು. ಈ ಬಂಡೆಗಾದ್ರು ಹೇಳಬಹುದು, ಇವನನ್ನು ಒಪ್ಪಿಸಲು ಆಗುವುದಿಲ್ಲವೆಂದು ವಾಪಸ್ಸು ಬಂದ್ರು.

ಕಂತಿನ ಹಣ ಸಂಗ್ರಹಿಸಲು ಸಭೆ ಸೇರಿದಾಗ, ಬ್ಯಾಂಕ್ ಖಾತೆ ತೆರೆಯಲು ಸಾಧ್ಯವಾಗದಿರುವ ಬಗ್ಗೆ ಹೇಳಿದರು. ಜಯಮ್ಮನು ನಮ್ಮ ಮನೆಯವರು ಬೇಡ ಅಂತ ಹೇಳ್ತಾರೆ. ನಾನೇ ಅವರ ಮಾತನ್ನು ಮೀರಿ ಬರಕಾಗೋದಿಲ್ಲ ಎಂದಳು. ಆ ಸಭೆಯಲ್ಲಿದ್ದ ಅಧಿಕಾರಿ, ಆಯ್ತಮ್ಮ ನಿಮ್ಮ ಯಜಮಾನರನ್ನೇ ಕೇಳೋಣ. ಮನೆಯಲ್ಲಿದ್ರೆ ಬರೋಕೆ ಹೇಳಮ್ಮಾ ಎನ್ನುತ್ತಿದ್ದ ಹಾಗೆ, ಅಲ್ಲೆ ಇದ್ದ ಹುಡುಗನೊಬ್ಬನು, ಆತನನ್ನು ಕರೆಯಲು ಕಾಲುಕಿತ್ತ.

ಜಯಮ್ಮನ ಗಂಡ ಇನ್ನು ಯುವಕ, ವಿದ್ಯಾವಂತ. ಸೀದಾ ಬಂದವನೆ, ಅಧಿಕಾರಿಯ ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ಕುಳಿತುಕೊಂಡ. ಗುಂಪಿನ ಬಗ್ಗೆ ಅದರಿಂದಾಗುವ ಉಪಯೋಗ, ಲೆಕ್ಕ ಪುಸ್ತಕ ಬರೆಯುವರ ಅಗತ್ಯ, ಓದು ಬರಹ ಬಂದವರ ಅವಶ್ಯಕತೆ, ಹೀಗೆ ಅವನಿಗೆ ವಿವರಿಸುತ್ತಾ ಹೋದರು. ಎಲ್ಲಾ ಕೇಳಿದ ಅವನು ಪುನಃ ಅದೇ ಪ್ಲೇಟನ್ನು ಹಾಕಿದ. ನಾನು ಕಳಿಸೋಕ್ಕೆ ಆಗಲ್ಲ. ನಮ್ಮ ಮನೆಯಲ್ಲಿ ತುಂಬಾ ಕೆಲಸ. ಕೆಲ್ಸಾ ಬಿಟ್ಟು ಹೀಗೆ ತಿರುಗಾಡಲು ನಮಗೆ ಟೈಂ ಇಲ್ಲ ಎಂದು ಪಟ್ಟುಹಿಡಿದ. ತಿರುಗಾಡೋದು ಹೆಚ್ಚು ಇರಲ್ಲ, ತಿಂಗಳಿಗೊಮ್ಮೆ ಅಥವಾ ಎರಡು ತಿಂಗಳಿಗೊಮ್ಮೆ ಹೋಗ್ಬೇಕಾಗುತ್ತೆ ಅಥವಾ ಇನ್ನು

ಇಬ್ಬರು ಹೋದರೂ ನಡೆಯುತ್ತೆ ಇವತ್ತು ಖಾತೆ ತೆರೆಯಲು ಮಾತ್ರ ಹೋದ್ರೆ ಸಾಕು ಎಂದು ಪುನಃ ಕೇಳಿಕೊಂಡರು.

ಅವನು ಒಪ್ಪಲಿಲ್ಲ ಮೀಟಿಂಗ್‌ನಲ್ಲಿದ್ದ ಜಯಮ್ಮ ಒಂದು ಮಾತು ಆಡ್ಲಿಲ್ಲ. ತಲೆಬಗ್ಗಿಸಿಕ್ಕೊಂಡು ಬರೆಯುತ್ತಿದ್ದಳು. "ಅಯ್ಯೋ ಬಿಡಿ ಸಾರ್ ಅವನನ್ನೇನು ಅಷ್ಟು ಕೇಳೋದು, ಬೇರೆ ಯಾರನ್ನಾದ್ರು ಸೇರಿಸಿಕೊಂಡ್ರೆ ಆಗುತ್ತೆ, ನಿಧಾನವಾದ್ರು ಪರವಾಗಿಲ್ಲ" ಉಳಿದವರು ಒಕ್ಕೊರಲಿನಿಂದ ನುಡಿದರು.

ಜಯಮ್ಮನ ಗಂಡ ಇನ್ನೂ ಬಿಸಿರಕ್ತದ ಯುವಕ. ಇವನಂತಹ ಯುವಕರು ಮನಸ್ಸು ಮಾಡಿದ್ದರೆ, ಆ ಗ್ರಾಮದ ಪರಿಸ್ಥಿತಿಯನ್ನೇ ಬದಲಾಯಿಸಬಹುದಾಗಿತ್ತು. ವಿದ್ಯಾವಂತ ಯುವಕರು, ಹೆಚ್ಚು ಹೆಚ್ಚು ಸಂಪ್ರದಾಯವಾದಿಗಳು, ಜಾತಿವಾದಿಗಳು ಆಗುತ್ತಿರುವುದು, ಆತಂಕದ ಸಂಗತಿಯಾಗಿದೆ. ಇದರ ಹೊರೆಯನ್ನು ತಾವು ಹೊರದೆ, ಸ್ತ್ರೀಯರ ಮೇಲೆ ಹೊರಿಸುತ್ತಾರೆ. ಹೆಂಗಸರು ಉಸಿರೆತ್ತದೆ, ಈ ಭಾರವನ್ನು ತಲೆಯ ಮೇಲೆ ಹೊತ್ತು ನಡೆಯಬೇಕಾಗುತ್ತದೆ.

*ರಾಜೇಶ್ವರಿ ಹೆಚ್. ಎಸ್.*

# ದಲಿತ ಮಹಿಳಾ ಲೋಕ

○ ಶ್ರೀಮತಿ ಎಂ. ಸವಿತಾ, ಮೈಸೂರು

ದಲಿತ ಮಹಿಳೆಯು ಅನುಭವಿಸುವ ಮಾನಸಿಕ ಮತ್ತು ದೈಹಿಕ ಚಿತ್ರಹಿಂಸೆಯೇ ಬೇರೆಯಾಗಿರುತ್ತದೆ. ನಮ್ಮ ಹಿಂದೂ ಸಮಾಜದಲ್ಲಿ ಸಾವಿರಾರು ಜಾತಿಗಳಿವೆ, ಸಾವಿರಾರು ಉಪ ಜಾತಿಗಳಿವೆ. ಇಂಥ ವ್ಯವಸ್ಥೆಯಲ್ಲಿ ಈಗ ನಾನು ಮೇಲ್ವರ್ಗದ ಮಹಿಳೆ ಹಾಗೂ ಕೆಳವರ್ಗದ ಮಹಿಳೆ ಎಂದು ಅನಿವಾರ್ಯವಾಗಿ ವಿಭಾಗಿಸಿ ಸಮಸ್ಯೆಗಳನ್ನು ಅವಲೋಕನಕ್ಕೆ ಒಡ್ಡುತ್ತಿದ್ದೇವೆ, ಇದಕ್ಕೆ ಪೂರಕವಾಗಿ ಕೆಲವು ನಿದರ್ಶನಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಪ್ರಸಂಗ ಒಂದು :**

ಒಂದೇ ಪರಿಸರದಲ್ಲಿ ವಿವಿಧ ಜಾತಿಗಳಿಗೆ ಸೇರಿದ ಜನ ವಾಸಿಸುವಲ್ಲಿ ಉತ್ತಮ ನಡೆ-ನುಡಿಯ ಉತ್ತಮ ಆಚಾರ-ವಿಚಾರಗಳನ್ನರಿತ ಒಂದು ದಲಿತ ಕುಟುಂಬವೂ ವಾಸವಾಗಿರುತ್ತದೆ. ಇವರ ನಡೆ-ನುಡಿ, ಆಚಾರ-ವಿಚಾರವಂತಿಕೆಗೆ ಸ್ಪಂದಿಸಿ ಒಂದು ವಿದ್ಯಾವಂತ ಬ್ರಾಹ್ಮಣ ಕುಟುಂಬದ ಉದ್ಯೋಗಿ ಮಹಿಳೆ ಈ ದಲಿತ ಕುಟುಂಬವನ್ನು ಆದರದಿಂದ ಕಾಣುತ್ತಾಳೆ. ಒಮ್ಮೆ ದಲಿತ ಮಹಿಳೆ ತುಂಬುಗರ್ಭಿಣಿ ಒತ್ತಾಸೆಗೆ ತನ್ನವರು ಎನ್ನುವವರು ಯಾರೂ ಹತ್ತಿರದಲ್ಲಿರುವುದಿಲ್ಲ ಇಂಥ ಸಮಯದಲ್ಲಿ ಸಹವಾಸಿಯಾದ ಉದ್ಯೋಗಸ್ಥ ಆ ಬ್ರಾಹ್ಮಣ ಮಹಿಳೆ ಕಛೇರಿಗೆ ರಜೆ ಹಾಕಿ ತನ್ನ ಗೆಳತಿಯ ಬಾಣಂತನಕ್ಕೆ ಮುಂದಾಗುತ್ತಾಳೆ. ಇಲ್ಲಿ ಗರ್ಭಿಣಿ ಗೆಳತಿಗೆ ಹೆರಿಗೆಗಾಗಿ ನರ್ಸಿಂಗ್ ಹೋಂಗೆ ಹೋಗುವ ಹಿಂದಿನಿಂದಲೂ ಹಿಡಿದು ಹೆರಿಗೆಯ ನಂತರ ಮಗು ನಡೆದಾಡುವವರೆಗೂ ಬಾಣಂತನದ ಹೊಣೆ ಹೊರುತ್ತಾಳೆ, ನಂತರವೂ ಈ ಬ್ರಾಹ್ಮಣ ಮಹಿಳೆಯ ಪ್ರೀತಿ. ಆದರಗಳು ಈ ದಲಿತ ಕುಟುಂಬದ ಮೇಲೆ ನಿರಂತರವಾಗಿ ಮುಂದುವರಿಯುತ್ತದೆ. ಸ್ವಲ್ಪಕಾಲಾನಂತರದಲ್ಲಿ ಅಕ್ಕ-ಪಕ್ಕದ ಸಹವಾಸಿಗಳು ಇವಳನ್ನು ದಲಿತ ಮಹಿಳೆ ಎಂದು ತಡವಾಗಿ ತಿಳಿದ ನಂತರ ಅಯ್ಯೋ! ಮೊದಲೇ ಈ ವಿಚಾರ ಹೇಳಬಾರದಿತ್ತೆ? ಎಂದು ಉದ್ಗಾರ ತೆಗೆಯುತ್ತಾರೆ. ಇಲ್ಲಿ ಪ್ರಧಾನವಾದ ಅಂಶವೆಂದರೆ ಬಾಣಂತನವನ್ನೂ ಮಾಡಿ ಮಾನವೀಯತೆಯನ್ನು ಮೆರೆದ ಬ್ರಾಹ್ಮಣ ಮಹಿಳೆಯ ಹೃದಯ ಶ್ರೀಮಂತಿಕೆಗೂ, ಅಯ್ಯೋ ಇವಳು ದಲಿತಳು ಎಂದು ಮೊದಲೇ ತಿಳಿಯಲಿಲ್ಲವಲ್ಲ ಎಂದು ಮಡಿವಂತಿಕೆಯ ಮಾತನ್ನಾಡುವ ಸಂಕುಚಿತ ಭಾವದ ಮೇಲ್ವರ್ಗದ ಜನರ ಕೀಳುಭಾವನೆಗೂ ಅದೆಷ್ಟೋ ಅಂತರ.

**ಪ್ರಸಂಗ ಎರಡು :**

ಪ್ರಸಂಗ ಒಂದರಲ್ಲಿ ವಿವರಿಸಿದಂತೆ ಸಾಮಾನ್ಯವಾಗಿ ಎಲ್ಲ ವರ್ಗದ ಜನರು ವಾಸಿಸುವಲ್ಲಿ ಒಂದು ವಿದ್ಯಾವಂತ ದಲಿತ ಕುಟುಂಬವೂ ವಾಸಿಸುತ್ತಿರುತ್ತದೆ. ಒಂದು ದಿನ ಒಬ್ಬ ಭಿಕ್ಷುಕಿ ಆಹಾರವಿಲ್ಲದೆ ದಣಿದು ಸುಸ್ತಾಗಿ ಮನೆ-ಮನೆಗಳಲ್ಲಿ ನೀರಿಗಾಗಿ ಅಂಗಲಾಚುತ್ತಾಳೆ

ಬೀದಿಯುದ್ದಕ್ಕೂ ನಾಲ್ಕಾರು ಮನೆಗಳಲ್ಲಿ ಆಕೆಗೆ ಕುಡಿಯಲು ನೀರೂ ಸಹ ಲಭ್ಯವಾಗುವುದಿಲ್ಲ. ಕೊನೆಗೆ ದಲಿತ ಕುಟುಂಬದ ಮನೆಯ ಮುಂದೆ ಬಂದ ಭಿಕ್ಷುಕಿ ಅಮ್ಮಾ; ನೀರು ಎಂದಾಗ ಮನೆಯೊಡತಿ ಹೊರಗೆ ಬಂದು ಧಣಿದು ಕಂಗಾಲಾದ ಆ ಭಿಕ್ಷುಕಿಗೆ ಕುಡಿಯಲು ನೀರು ಕೊಟ್ಟು ಬಾಯಾರಿಕೆಯನ್ನು ತಣಿಸುತ್ತಾಳೆ. ನಂತರ ಊಟ ಮಾಡುತ್ತೀಯಾ? ಎಂದು ಕೇಳುತ್ತಾಳೆ. ಆಗ ಆ ಭಿಕ್ಷುಕಿ ಮೇಲ್ವರ್ಗದ ಜಾತಿಗೆ ಸೇರಿದವಳು ಎಂಬುದು ಅವಳ ಪ್ರಶ್ನೆಯಿಂದ ಸ್ಪಷ್ಟವಾಗುತ್ತದೆ. ಅವಳಿಗೆ ನಿಜವಾಗಿಯೂ ಬೇಕಾಗಿರುವುದು ಭಿಕ್ಷೆ; ಅನ್ನ ಆಹಾರ, ನೀರು, ಇಂಥ ಸ್ಥಿತಿಯಲ್ಲಿಯೂ ಅವಳಿಗೆ ಅಂಟಿದ ಮೌಢ್ಯತೆ ದಲಿತ ಮಹಿಳೆಯ ಮನಸ್ಸಿನಲ್ಲಿ ಸಮಾಜದ ವ್ಯವಸ್ಥೆಯ ಬಗ್ಗೆ ಹೇಸಿಗೆ ಹುಟ್ಟಿಸುತ್ತದೆ.

ದಲಿತ ಮಹಿಳೆಯೊಬ್ಬಳು ಮುಂಜಾನೆ ಎದ್ದು ಒಡೆಯನ ಮನೆಯಲ್ಲಿ ದನಗಳ ಕೊಟ್ಟಿಗೆ ಗುಡಿಸಲು ಹೋಗುತ್ತಾಳೆ. ಇಲ್ಲಿ ಕಸ-ಮುಸುರೆ ಸ್ವಚ್ಛ ಮಾಡುವಾಗ ಒಡತಿಯ ಕೋಪಕ್ಕೆ ಮಡಿವಂತಿಕೆಯ ಮಾತುಗಳಿಗೆ ಗುರಿಯಾಗುತ್ತಾಳೆ. ಇಂಥ ಜೀತದ ಕೆಲಸವನ್ನು ಮಾಡಿದ ನಂತರ ಅವಳು ಕೊಟ್ಟದ್ದನ್ನು ತಿಂದು ಜಮೀನಿಗೆ ದುಡಿಯಲು ಹೋಗುತ್ತಾಳೆ. ಒಡೆಯ ಜಮೀನಿನಲ್ಲಿ ಮಣ್ಣು ಹೊರುವ, ಕಳೆ ಕೀಳುವ, ಮುಂತಾಗಿ ಅದೆಷ್ಟೋ ಕಷ್ಟದ ಕೆಲಸಗಳನ್ನು ದುಡಿಸಿಕೊಳ್ಳುತ್ತಾನೆ ಇಷ್ಟಕ್ಕೆ ಸುಮ್ಮನಿರದ ಒಡೆಯ ಮಡಿವಂತಿಕೆಯ ಮಾತನ್ನು ಬಿಟ್ಟು ತನಗೆ ಬೇಕೆನಿಸಿದಾಗೆಲ್ಲ ಈ ಮಹಿಳೆಯನ್ನು ಹಾಸಿಗೆಯನ್ನಾಗಿ ಮಾಡಿಕೊಳ್ಳುತ್ತಾನೆ.

ಹೀಗೆ ಇಂಥ ಪ್ರಸಂಗಗಳು ನಿರಂತರವಾಗಿ ನಡೆದೇ ಬಂದಿವೆ. ಇಲ್ಲಿ ಪ್ರಸಂಗ ಒಂದರಲ್ಲಿನ ಉದ್ಯೋಗಸ್ತ ಬ್ರಾಹ್ಮಣ ಮಹಿಳೆ ದಲಿತ ಗೆಳತಿಯ ಬಾಣಂತನ ಮಾಡಿದ್ದು, ಪ್ರಸಂಗ ಎರಡರಲ್ಲಿ ದರಿದ್ರಳಾದ ಭಿಕ್ಷುಕಿಗೆ ನೀರು ಕೊಟ್ಟು ಬಾಯಾರಿಕೆಯನ್ನು ಹೋಗಲಾಡಿಸಿ ನಂತರ ಊಟ ಬೇಕೆ? ಎಂದು ಕೇಳಿದ್ದು ಮಾನವೀತೆಯನ್ನು ಮೆರೆದ ಅಮೂಲ್ಯ ಗುಣಗಳು. ಆದ್ದರಿಂದ ಇಲ್ಲಿ ಈ ಇಬ್ಬರೂ ಮಹಿಳೆಯರು ಮೇಲ್ಪಂಕ್ತಿಯಲ್ಲಿ ನಿಲ್ಲುತ್ತಾರೆ.

ಅಕ್ಕ-ಪಕ್ಕದಲ್ಲಿ ವಾಸಿಸುತ್ತಿದ್ದವಳು ಧಲಿತಳು ಎಂದು ತಿಳಿದ ನಂತರ ಮೂಗು ಮುರಿದಂತೆ ಮಾತನಾಡಿದ ಹಲವರು, ನೀರು ಕುಡಿದು ಜಾತಿ ಕೇಳಿದ ಭಿಕ್ಷುಕಿ, ಮಡಿವಂತಿಕೆಯ ಕಟ್ಟಳೆ ಮೀರಿ ದುಡಿಯುವ ದಲಿತ ಹೆಣ್ಣುಮಗಳನ್ನು ಬೇಕಾದಾಗೆಲ್ಲಾ ಉಪಯೋಗಿಸಿಕೊಂಡದ್ದು ಮಾನವೀಯ ಮೌಲ್ಯಗಳಿಗೆ ಎಸಗಿದ ಅಪಚಾರ, ಆಶಾಢಭೂತಿತನ. ಇಂಥ ಸನ್ನಿವೇಶಗಳು ಸಹಜವಾಗಿಯೇ ಬೇಸರವನ್ನುಟ್ಟಿಸಿದರೆ, ಕ್ರಾಂತಿಕಾರರಲ್ಲಿ ರಕ್ತ ಕುದಿಯುತ್ತದೆ. ಸಮಾಜದಲ್ಲಿ ಎಲ್ಲ ವರ್ಗದ ಮಹಿಳೆಗೂ ಆಗುತ್ತಿರುವ ಅನ್ಯಾಯ-ಅತ್ಯಾಚಾರಗಳು ದಲಿತ ಹೆಣ್ಣುಮಕ್ಕಳಲ್ಲಿಯೂ ಒಂದು ಕೈ ಹೆಚ್ಚಾಗಿಯೇ ನಡೆಯುತ್ತಿದೆ.

○

---

# ಜಾಗೃತ ಮಹಿಳಾ ವೇದಿಕೆಯ ಸಭೆಯ ವರದಿಗಳು

*ಕುಶಾಲನಗರದಲ್ಲಿ ದಲಿತ ಯುವತಿ ಪ್ರಮಿಳಾ ಮೇಲಿನ ಅತ್ಯಾಚಾರ, ಕೊಲೆಯನ್ನು ವಿರೋಧಿಸಿ ನಡೆದ ಪ್ರತಿಭಟನೆಯ ವರದಿಯನ್ನು 'ಮಾನಸ' ಕಳೆದ ಸಂಚಿಕೆಯಲ್ಲಿ ಪ್ರಕಟಿಸಿತ್ತು. ಪ್ರತಿಭಟನೆಯ ಹಿನ್ನೆಲೆಯಲ್ಲಿ ಪ್ರಾರಂಭವಾದ 'ಜಾಗೃತ ಮಹಿಳಾ ವೇದಿಕೆ'ಯು ಕುಶಾಲನಗರದಲ್ಲಿ ಉತ್ಸಾಹದಿಂದ ಕೆಲಸ ಮಾಡುತ್ತಿದೆ. ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರ ಅಂಗವಾಗಿ ವೇದಿಕೆಯು ಸಭೆಯೊಂದನ್ನು ಏರ್ಪಡಿಸಿ ಜನವಾದಿ ಮಹಿಳಾ ಸಂಘಟನೆಯ ವಿಮಲ ಅವರನ್ನು ಆಹ್ವಾನಿಸಿತ್ತು. ಅದೇ ತಿಂಗಳಿನಲ್ಲಿ ಮತ್ತೊಂದು ಸಭೆಯನ್ನು ಏರ್ಪಡಿಸಿ ಮಾನಸ ಬಳಗದವರನ್ನು ಅನುಭವ ಹಂಚಿಕೊಳ್ಳಲು ಆಹ್ವಾನಿಸಿದ್ದರು. ಎರಡು ಸಭೆಯ ವರದಿಯನ್ನು ಜಯಶ್ರೀಯವರು ಮಾನಸಕ್ಕಾಗಿ ಬರೆದು ಕಳುಹಿಸಿದ್ದಾರೆ.*

ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ, ವರದಕ್ಷಿಣೆ ಸಾವು, ಚಾರಿತ್ರ್ಯವಧೆ ಮುಂತಾದ ದೌರ್ಜನ್ಯ ಪ್ರಕರಣಗಳನ್ನು ಕೇವಲ ಆ ಘಟನೆಗಳ ಸುತ್ತ ಮಾತ್ರ ನೋಡದೆ ಇಂತಹ ಘಟನೆಗಳು ಸಂಭವಿಸಲು ಕಾರಣೀಭೂತವಾದ ಸಾಮಾಜಿಕ ಪರಿಸ್ಥಿತಿಗಳ ಬಗ್ಗೆ ಅವಲೋಕಿಸಬೇಕು. ಯಾಕೆಂದರೆ ಈ ಸಮಾಜದ ಅಧಿಕಾರ ನಡೆಸುತ್ತಿರುವ ಪ್ರಭುತ್ವ ಯಾವತ್ತೂ ಬಡಜನರ ಮೇಲೆ ಮತ್ತು ಮಹಿಳೆಯರ ಮೇಲೆ ಇಂತಹ ದೌರ್ಜನ್ಯಗಳನ್ನು ಎಸಗುತ್ತಿರುತ್ತದೆ. ಈ ಮೂಲಕ [illegible]

ಕೆಳವರ್ಗದ ಬಹುಸಂಖ್ಯಾತ ಜನರಲ್ಲಿ ಒಂದು ಭಯದ ವಾತಾವರಣವನ್ನು ಮೂಡಿಸಲು ಪ್ರಯತ್ನಿಸುತ್ತದೆ. ಇಂತಹ ಭಯವನ್ನು ನಿವಾರಿಸಿ ಆತ್ಮ ಗೌರವದಿಂದ ಬಾಳಲು ನಿರಂತರ ಹೋರಾಟಗಳು ಮಾತ್ರ ದಾರಿ ತೋರಿಸುತ್ತವೆ ಎಂದು ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷೆ ವಿಮಲಾ ನುಡಿದರು.

ಮುಂದುವರಿದ ಅವರು ಪ್ರಭುತ್ವವು ಸಮಾಜದ ಮೇಲೆ ತನ್ನ ಹತೋಟಿ ಉಳಿಸಿಕೊಳ್ಳಲು ಪ್ರಜಾಪ್ರಭುತ್ವದ ಸಂಸ್ಥೆಗಳು ಕೂಡಾ ಸಹಕರಿಸುತ್ತವೆ. ಸರಕಾರಿ ಇಲಾಖೆಗಳು, ಪೊಲೀಸ್ ಇಲಾಖೆಗಳು ಅಧಿಕಾರಸ್ಥರಿಗೆ ಸಹಕರಿಸುವ ನಿಟ್ಟಿನಲ್ಲಿ ಬಡವರ ಮೇಲೆ ದಮನಕಾರಿ ಕಾರ್ಯಗಳನ್ನು ಮಾಡುತ್ತಿರುತ್ತವೆ. ನ್ಯಾಯಾಂಗ ಕೂಡಾ ಮೇಲ್ವರ್ಗದ ಹಿತಾಸಕ್ತಿಗಳನ್ನೇ ಕಾಪಾಡಿ ಮಾನವ ವಿರೋಧಿ, ತೀರ್ಪುಗಳನ್ನೇ ನೀಡುವುದು ಸರ್ವೇಸಾಮಾನ್ಯ ಎಂದರು. ಇದಕ್ಕೆ ಉದಾಹರಣೆಯಾಗಿ ರಾಜಸ್ಥಾನದ ಬನ್ವಾರಿ ದೇವಿಯ ಅತ್ಯಾಚಾರ ಪ್ರಕರಣಕ್ಕೆ ಕಾರಣರಾದ ಮೇಲ್ವರ್ಗಕ್ಕೆ ಸೇರಿದ ಆರೋಪಿಗಳನ್ನು ಏನೂ ಶಿಕ್ಷೆ ನೀಡದೆ ಖುಲಾಸೆ ಮಾಡಿದ ಪ್ರಕರಣವನ್ನು ಉಲ್ಲೇಖಿಸಿದರು.

ಸಮಾಜದ ಈ ನಿರಂಕುಶ ಧೋರಣೆಯ ವಿರುದ್ಧ ಪುರುಷ ಮತ್ತು ಮಹಿಳೆ ಇಬ್ಬರೂ ಸೇರಿ ನಿರಂತರವಾದ ಹೋರಾಟಗಳನ್ನು ಸಂಘಟಿಸಬೇಕಾದ ಅಗತ್ಯವಿದೆ ಎಂದ ಅವರು ಮಹಿಳೆ ಮತ್ತು ಬಡವರು ಶೋಷಣೆಗೆ ಸುಲಭವಾಗಿ ಸಿಗುವ ಗುರಿಗಳು ಎಂದರು. ❍

* * *

ಮಹಿಳಾ ಸಂಘಟನೆಗಳು ಸತತವಾಗಿ ಸರಕಾರದ ಮೇಲೆ ಹಾಗೂ ಸಮಾಜದ ಮೇಲೆ ಒತ್ತಡ ಹೇರಿ ಮಹಿಳಾ ದೌರ್ಜನ್ಯಗಳ ಬಗ್ಗೆ ಪ್ರತಿಭಟನೆಗಳನ್ನು ನಡೆಸುತ್ತಿರುವುದರಿಂದಲೇ ಈಗ ಹಲವಾರು ಮಹಿಳಾ ಪರ ಕಾನೂನುಗಳು ರೂಪುಗೊಂಡಿವೆಯಲ್ಲದೆ, ಸ್ತ್ರೀಯರನ್ನು ಸಮಾಜ ಪರಿಗಣಿಸುವ ದೃಷ್ಟಿಕೋನವು ಸ್ವಲ್ಪ ಮಟ್ಟಿಗೆ ಬದಲಾಗಿದೆ ಎಂದು ಸರಸ್ವತಿ ನುಡಿದರು.

ಅಂತರರಾಷ್ಟ್ರೀಯ ಮಹಿಳಾ ದಿನದ ಪ್ರಾಮುಖ್ಯತೆ ಬಗ್ಗೆ ವಿವರಿಸುತ್ತಾ ಇಂಗ್ಲೆಂಡಿನ ಬಟ್ಟೆ ಗಿರಣಿಯಲ್ಲಿ ಮಹಿಳೆಯರು ದಿನಕ್ಕೆ 18 ಗಂಟೆ ಕೆಲಸ ಮಾಡುತ್ತಿದ್ದರು. 1870ರಲ್ಲಿ ಆ ಹೆಂಗಸರು ಸಮಯದ ಕಡಿತ ಮತ್ತು ಸಂಬಳದ ಹೆಚ್ಚಳಕ್ಕಾಗಿ ಬೀದಿಗಿಳಿದು ಚಳವಳಿ ಮಾಡಿದರು. ಸುದೀರ್ಘ ಚಳವಳಿಯ ನಂತರ ಅದರಲ್ಲಿ ಯಶಸ್ವಿ ಕಂಡರು. ಅದೇ ಮಾರ್ಚ್ 8 ಈ ದಿನವನ್ನು ಅಂತರರಾಷ್ಟ್ರೀಯ ಮಹಿಳಾ ದಿನವನ್ನಾಗಿ ಪ್ರತೀ ವರ್ಷ ಆಚರಿಸಲಾಗುತ್ತಿದೆ ಎಂದರು.

ಭಾರತದ ಮಹಿಳೆಯರ ಸ್ಥಿತಿಗತಿ ಬಗ್ಗೆ ವಿಶ್ಲೇಷಿಸುತ್ತಾ 1977-78ರ ನಂತರ ಭಾರತದ ಮಹಿಳೆಯರ ಸ್ಥಿತಿಗತಿ ಕುರಿತು ವಿಶ್ಲೇಷಣೆ ಆರಂಭವಾದಾಗ ವರದಕ್ಷಿಣೆ, ಆರೋಗ್ಯ, ದುಡಿಮೆ, ಶಿಕ್ಷಣ ಇವುಗಳ ಬಗ್ಗೆ ಗಾಬರಿ ಹುಟ್ಟಿಸುವಂತಹ ಮಾಹಿತಿಗಳು ದೊರೆತವು. ಆ ನಂತರದಲ್ಲಿ ಸಹೇಲಿ, ವಿಮೋಚನಾ, ಅಚಲ, ಸಮತಾ ಹೀಗೆ ಬೇರೆ ಬೇರೆ ಕಡೆಗಳಲ್ಲಿ ವಿಭಿನ್ನವಾದ ಉದ್ದೇಶ, ಗುರಿ, ಧೋರಣೆಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತಿರುವ ಮಹಿಳಾ ಸಂಘಟನೆಗಳು ಪ್ರಾರಂಭವಾದವು. ಸಹೇಲಿ ಮಹಿಳೆಯರ ಆರೋಗ್ಯದ ಕುರಿತು ಗಮನಾರ್ಹ ಕೆಲಸ ಮಾಡುತ್ತಿದೆ. ಕುಟುಂಬ ಯೋಜನೆಯ ಭಾರವನ್ನು ಮಹಿಳೆಯರ ಮೇಲೆ ಹೆಚ್ಚು ಹೊರಿಸಿ; ಆರೋಗ್ಯ ಇಲಾಖೆಯಾಗಲಿ, ಸರಕಾರವಾಗಲಿ ಅವರ ಆರೋಗ್ಯದ ಬಗ್ಗೆ ಗಮನಕೊಡದೆ ಅಪಾಯಕಾರಿ ಗರ್ಭನಿರೋಧಕಗಳನ್ನು ಹೆಂಗಸರ ಮೇಲೆ ಹೇರಿದ್ದು; ಮಲೇರಿಯಾ ಕಾಯಿಲೆಗೆ ಉಪಯೋಗಿಸು ವಂತಹ ಕ್ವಿನ್‌ಕ್ರೈನ್‌ನ್ನು ಗರ್ಭನಿರೋಧಕವಾಗಿ ಮಹಿಳೆಯರ ಮೇಲೆ ಪ್ರಯೋಗಿಸಿ ಅವರ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುವುದರ ವಿರುದ್ಧ ಮಹಿಳಾ ಗುಂಪುಗಳು ಪ್ರತಿಭಟಿಸಿದ್ದನ್ನು ಸಭೆಯ ಮುಂದಿಟ್ಟರು.

ಮಾನಸ ಪತ್ರಿಕೆಯ ಬಗ್ಗೆ ಮಾತನಾಡುತ್ತಾ ಮಾನಸ ಯಾವುದೇ ವಿದೇಶಿ ಸಂಸ್ಥೆಗಳಿಂದಾಗಲಿ, ಸರಕಾರದಿಂದಾಗಲಿ ಹಣ ಸಹಾಯ ಪಡೆಯದೆ ನಮ್ಮ ನಿಮ್ಮೆಲ್ಲರ ಸಹಾಯದಿಂದ ನಡೆಯುತ್ತಿರುವ ಪತ್ರಿಕೆ. ಕೇಳಿಸದಿದ್ದ ಮಹಿಳಾ ಧ್ವನಿ ಪತ್ರಿಕೆಯ ರೂಪದಲ್ಲಿ ಹೊರ ಬರುತ್ತಾ ಇದೆ ಎಂದು ನುಡಿದರು.

ಶಹಬಾನು ಪ್ರಕರಣ, ಮಥುರಾ ಎಂಬ ಆದಿವಾಸಿ ಬಾಲಕಿಯನ್ನು ಪೊಲೀಸರು ಅತ್ಯಾಚಾರ ಮಾಡಿದ ಪ್ರಕರಣ,

ರಮಿಜಾಬಿ ಮೇಲೆ ಹೈದರಾಬಾದ್ ಪೊಲೀಸರು ಅತ್ಯಾಚಾರ ಮಾಡಿದ ಪ್ರಕರಣಗಳಿಂದ ದೇಶದಲ್ಲಿ ಮಹಿಳಾ ಪರ ಚಳವಳಿಗಳು ತೀವ್ರವಾಗಿ ಬೆಳೆಯಲು ಕಾರಣವಾದವು. ಮಹಿಳಾ ಸಂಘಟನೆಗಳು ಬರೀ ದೌರ್ಜನ್ಯಗಳ ಬಗ್ಗೆ ಮಾತ್ರ ಪ್ರತಿಭಟಿಸುವುದಕ್ಕೆ ಸೀಮಿತಗೊಳ್ಳದೆ ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುವ ಕೋಮುವಾದ, ಕಂಬಾಲಪಲ್ಲಿ ದುರಂತದಂತಹ ಘಟನೆಗಳ ವಿರುದ್ಧ, ಮಹಿಳೆಯರ ಮೇಲಾಗುವ ಲೈಂಗಿಕ ಕಿರುಕುಳಗಳ ವಿರುದ್ಧ, ವರ್ಗ ತಾರತಮ್ಯದ ವಿರುದ್ಧ ಹೋರಾಡಬೇಕು. ನಾವೆಲ್ಲರೂ ಕೂಡಾ ಅಂತಹ ಧೋರಣೆಗೆ ಬದ್ಧರಾಗಿರಬೇಕು ಎಂದು ಸರಸ್ವತಿ ನುಡಿದರು.

ಮಹಿಳಾ ಸ್ವ-ಸಹಾಯ ಸಂಘಗಳು ಗ್ರಾಮೀಣ ಪ್ರದೇಶದ ಬಡ ಮಹಿಳೆಯರ ಜೀವನದಲ್ಲಿ ಪರಿಣಾಮಕಾರಿ ಪಾತ್ರ ವಹಿಸುವುದರ ಬಗ್ಗೆ ವಿವರವಾಗಿ ಮಾಹಿತಿ ನೀಡಿದ ಸವಿತಾ, ಗ್ರಾಮೀಣ ಮಹಿಳೆಯರನ್ನು ಬಡ್ಡಿ ಹಣದ ವ್ಯಾಪಾರಿಗಳು ಶೋಷಿಸುತ್ತಿರುವುದನ್ನು ತಪ್ಪಿಸಿ ತಮ್ಮ ಸ್ವಂತ ಉಳಿತಾಯದ ಹಣದಿಂದಲೇ ಅಭಿವೃದ್ಧಿಯಾಗಲು ಸ್ವ ಸಹಾಯ ಸಂಘಗಳು ಪ್ರಮುಖ ಪಾತ್ರ ವಹಿಸಿವೆ ಎಂದು ನುಡಿದರು.

ಜಯಶ್ರೀ, ಕುಶಾಲನಗರ

* * *

## ಕರ್ನಾಟಕದ ಹರಾಜನ್ನು ತಡೆಗಟ್ಟೋಣ!

ಜೂನ್ 5 ಮತ್ತು 6 ರಂದು ಬೆಂಗಳೂರಿನಲ್ಲಿ ವಿಶ್ವ ಜಾಗತಿಕ ಹೂಡಿಕೆದಾರರ ಸಮ್ಮೇಳನವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಹೈಟೆಕ್ ಕೃಷ್ಣರವರು ನಡೆಸಿದರು. ಜಪಿಸಲು ಮಾತ್ರ ಸ್ವದೇಶಿ ಮಂತ್ರ ಬಳಸುವ ವಾಜಪೇಯಿ ನೇತೃತ್ವದ NDA ಸರ್ಕಾರವು ಹೈಟೆಕ್ ಕೃಷ್ಣರೊಂದಿಗೆ ಕೈಜೋಡಿಸಿ ಕರ್ನಾಟಕವನ್ನು ಮಾರಲು ಸಜ್ಜಾಗಿದ್ದಾರೆ. 10 ಸಾವಿರ ಕೋಟಿ ಬಂಡವಾಳ ಹರಿದು ಬಂದು ದೇಶದಲ್ಲಿರುವ ನಿರುದ್ಯೋಗ ಕೊಚ್ಚಿ ಹೋಗಲಿದೆಯೆಂದು ಹೈಟೆಕ್ ಕೃಷ್ಣ ಬೂಸಿ ಬಿಡುತ್ತಿದ್ದಾರೆ. ನಾಡಿನ ಮಾರಾಟವನ್ನು ಸ್ವದೇಶಿಗಳಾಗಲಿ, ಕಾರ್ಮಿಕ ಸಂಘಗಳಾಗಲಿ, ರಾಜಕೀಯ ಗುಂಪುಗಳಾಗಲಿ ಸೊಲ್ಲೆತ್ತದಿದ್ದುದು ಆಶ್ಚರ್ಯ ಹುಟ್ಟಿಸಿದ ಸಂದರ್ಭದಲ್ಲೇ ಸಾಮ್ರಾಜ್ಯಶಾಹಿ ವಿರೋಧಿ ಒಕ್ಕೂಟ - ಕರ್ನಾಟಕದವರು ಹಲವಾರು ಕಾರ್ಯಕ್ರಮ ಹಮ್ಮಿಕೊಂಡು ಪ್ರತಿಭಟಿಸಿದ್ದು ಸಮಾಧಾನಕರ ವಿಷಯ. ಸಾಮ್ರಾಜ್ಯಶಾಹಿ ವಿರೋಧಿ ಒಕ್ಕೂಟವು ಪ್ರಜಾತಾಂತ್ರಿಕ ವೇದಿಕೆ, ಕರ್ನಾಟಕ ವಿಮೋಚನ ರಂಗ, ಮಹಿಳಾ ಜಾಗೃತಿ, ಜಗಮೆಚ್ಚಿದ್ದ ಮಗ ರಾಜ್‌ಕುಮಾರ್ ಅಭಿಮಾನಿ ಸಂಘ, ದುಡಿಯೋರ ಹೋರಾಟ ಹಾಗೂ ಇನ್ನಿತರ ಪ್ರಗತಿಪರ ಸಂಘಟನೆಗಳನ್ನೊಳಗೊಂಡಿದೆ.

ದಿನಾಂಕ 28 ರಂದು ಸಂಜೆ, ಕಾನೂನು ಕಾಲೇಜಿನಲ್ಲಿ ಜಾಗತಿಕ ಹೂಡಿಕೆದಾರರ ಮೇಳದಿಂದ ಉಂಟಾಗುವ ಪರಿಣಾಮಗಳ ಕುರಿತು ಚರ್ಚಿಸಲಾಯಿತು.

ಜೂನ್ 1 ರಂದು ಯಶವಂತಪುರದಲ್ಲಿ ಮತ್ತು ಜೂನ್ 2 ರಂದು ವಿಜಯನಗರದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಜೂನ್ 4 ರಂದು ಬೆಳಗ್ಗೆ ಮೈಸೂರ್ ಬ್ಯಾಂಕ್ ವೃತ್ತದ ಬಳಿ ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಸಭೆಯ ನಂತರ ಭೂತ ದಹನ ಮಾಡಲಾಯಿತು.

ಜೂನ್ 5 ರಂದು ಬೆಳಗ್ಗೆ ಚಿಕ್ಕಲಾಲ್‌ಬಾಗ್‌ನಿಂದ ಸಮ್ಮೇಳನ ನಡೆಯುವ ಸ್ಥಳದವರೆಗೂ ಪ್ರತಿಭಟನಾ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು.

ಪ್ರತಿಭಟನೆಯ ಅಂಗವಾಗಿ ಸಾಮ್ರಾಜ್ಯಶಾಹಿ ವಿರೋಧಿ ಒಕ್ಕೂಟದವರು ಹೊರತಂದ ಕರಪತ್ರವನ್ನು ಮಾನಸ ಓದುಗರಿಗಾಗಿ ಪ್ರಕಟಿಸಿದ್ದೇವೆ.

## ಜಾಗತಿಕ ಹೂಡಿಕೆದಾರರ ಸಮ್ಮೇಳನ (Global Investors Meet - GIM)ದ ಹೆಸರಿನಲ್ಲಿ ನಡೆಯಲಿರುವ "ಕರ್ನಾಟಕದಲ್ಲಿ ಹರಾಜನ್ನು" ತಡೆಗಟ್ಟೋಣ! ನಾಡಿನ ನವವಸಾಹತೀಕರಣದ ವಿರುದ್ಧ ಹೋರಾಡೋಣ!!

*ನಾಗರೀಕರೇ, ನಾಡ ಪ್ರೇಮಿಗಳೇ, ಸ್ವಾತಂತ್ರ್ಯ ಪ್ರಿಯರೇ,*

ಕರ್ನಾಟಕ ಮಾರಾಟಕ್ಕಿದೆ. ಇದೇ ಜೂನ್ 5 ಮತ್ತು 6ರಂದು ಬೆಂಗಳೂರಿನಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮ್ಮೇಳನದಲ್ಲಿ ಸುಮಾರು 10,000 ಕೋಟಿ ರೂಪಾಯಿನಷ್ಟು ಬೆಲೆಗೆ ಕರ್ನಾಟಕವನ್ನು ಮಾರಾಟಕ್ಕಿಡಲಾಗುತ್ತಿದೆ. ಇಲ್ಲಿ ಕರ್ನಾಟಕ ಎಂದರೆ, ಸಾವಿರಾರು ಎಕರೆ ಭೂಮಿ, ಅದರಲ್ಲಿ ತಮ್ಮ ಅನ್ನವನ್ನು ಬೆಳೆದುಕೊಳ್ಳುತ್ತಿದ್ದ ರೈತರು, ಬಹುರಾಷ್ಟ್ರೀಯ ಕಂಪೆನಿಗಳು ಬಂದಮೇಲೆ ಮುಚ್ಚಿಕೊಳ್ಳುವ ಅನಿವಾರ್ಯ ಸ್ಥಿತಿಗೆ ಬರುವ ಇನ್ನಷ್ಟು ಸಣ್ಣ ದೊಡ್ಡ ಕೈಗಾರಿಕೆಗಳು, ಅದರಲ್ಲಿ ಕೆಲಸ ಮಾಡುತ್ತಿರುವ ಲಕ್ಷಾಂತರ ಕಾರ್ಮಿಕರು, ಯಾವುದೇ ಕಾನೂನಿನ ಅಡೆತಡೆಗಳಿಲ್ಲದೆ ಮಲಿನಗೊಳ್ಳಲು ಸಿದ್ಧವಿರುವ ಪರಿಸರ, ವಿದೇಶೀಯರ ಮೋಜಿಗಾಗಿ ಭತ್ತ, ಕಬ್ಬು ಬೆಳೆಯುತ್ತಿದ್ದು ಈಗ ಗಾಲ್ಫ್ ಕೋರ್ಸ್‌ಗಿ, ಪಂಚತಾರಾ ಹೋಟೆಲ್ಲುಗಳಾಗಿ, ರೆಸಾರ್ಟ್ ಗಳಾಗಿ ಪರಿವರ್ತಿತಗೊಳ್ಳಲಿರುವ ಭೂಮಿ, ದುಡ್ಡಿದ್ದವರ ತೆವಲಿಗೆ ಮೈ ಮಾರಿಕೊಳ್ಳಲೇಬೇಕಾದ ಮಹಿಳೆಯರ ಮಾನ ಇವೆಲ್ಲದರ ಸಗಟು ಮಾರಾಟ ಆ ಎರಡು ದಿನಗಳಂದು ಭರ್ಜರಿಯಾಗಿ ನಡೆಯಲಿದೆ. ಮಾರಿಬಿಡಲು ಹಾರ್ವರ್ಡ್ ಕೃಷ್ಣರ ಸರ್ಕಾರ ರತ್ನಗಂಬಳಿ ಹಾಸಿ ಸಿದ್ಧವಾಗಿರುವುದಲ್ಲದೆ ಇ-ಮೇಲ್ ಮುಖಾಂತರ, ಪತ್ರಗಳ ಮುಖಾಂತರ ಸಾವಿರಾರು ಬಹುರಾಷ್ಟ್ರೀಯ ಕಂಪೆನಿಗಳನ್ನು ಸಂಪರ್ಕಿಸಿ ಗೋಗರೆಯುತ್ತಿದೆ. ಭ್ರಮೆಗಳಲ್ಲಿ ಬದುಕುವವರ ಕಣ್ಣಿನಲ್ಲಿ ಹೀರೋಗಳಾಗಿ ಮೆರೆಯುತ್ತಿರುವ ಇನ್‌ಫೋಸಿಸ್‌ನ ನಾರಾಯಣಮೂರ್ತಿಗಳು, ವಿಪ್ರೋದ ಪ್ರೇಮ್‌ಜಿಗಳು ಅಂದು ಕರ್ನಾಟಕವೆಂಬ 'ಸರಕಿನ' ಗುಣಗಾನ ಮಾಡಿ ಕೃತಾರ್ಥರಾಗಲು ಹಾತೊರೆಯುತ್ತಿದ್ದಾರೆ. 1947ಕ್ಕೆ ಮುಂಚೆ ಮತ್ತು ಆನಂತರ ಭಾರತದ ಸಂಪತ್ತಿಗೂ ವಿದೇಶೀ ದೊರೆಗಳ ಎಂಜಲಿಗೂ ಮಧ್ಯೆ ದಲ್ಲಾಳೀ ಏಜೆಂಟ್‌ರಾಗಿ ಕೆಲಸ ಮಾಡುತ್ತಿರುವ ಟಾಟಾಗಳು, ಅಂಬಾನಿಗಳು, ಬಜಾಜ್‌ಗಳು ಈ ಕಾರ್ಯಕ್ರಮ ಗಳನ್ನು ನಿರ್ವಹಿಸಲಿದ್ದಾರೆ. ಈ ದಲ್ಲಾಳಿ ಏಜೆಂಟರುಗಳ ನಿಷ್ಠಾವಂತ ಕಾರಕೂನರಾಗಿ ಸೇವೆ ಸಲ್ಲಿಸಿದ ಮನಮೋಹನ್ ಸಿಂಗ್‌ಗಳೂ ಅಹ್ಲುವಾಲಿಯಾಗಳು ಅಂದು ಈ ದೇಶದ ಸರ್ಕಾರ ಹೇಗೆ ಬಡವರುದ್ಧಾರದ ಘೋಷಣೆಯನ್ನು ಕೂಡ ಹಾಕದೆ ಬಹುರಾಷ್ಟ್ರೀಯ ಕಂಪನಿಗಳ ಸೇವೆಗೆ ಕಟಿಬದ್ಧವಾಗಿ ನಿಂತಿದೆ ಎಂದು ತಮ್ಮೆಲ್ಲಾ ಪರಿಣತಿಯನ್ನೂ ಉಪಯೋಗಿಸಿ ವರ್ಣಿಸ ಲಿದ್ದಾರೆ.

*ಆತ್ಮೀಯ ಪ್ರಜಾತಂತ್ರವಾದಿಗಳೇ,*

ಮೇಲೆ ವರ್ಣಿಸಿರುವುದು ಕಪೋಲಕಲ್ಪಿತ ನಾಟಕವೇನೂ ಆಗಿರದೆ, ನಾವು ಸದ್ಯದಲ್ಲೇ ನೋಡಲಿರುವ ಕಟುವಾಸ್ತವ ವಾಗಲಿದೆ.

**ಜಾಗತಿಕ ಮೇಳದಲ್ಲಿ ಏನು ನಡೆಯುತ್ತದೆ?**

ಸರ್ಕಾರ ಗುರುತಿಸಿರುವ 15 ನಿರ್ದಿಷ್ಟ ಕ್ಷೇತ್ರಗಳಲ್ಲಿ 242.65 ಮಿಲಿಯನ್ ಡಾಲರ್ (10,000 ಕೋಟಿ ರೂ.)ಗಳ ವಿದೇಶೀ ಬಂಡವಾಳದ ನಿರೀಕ್ಷೆಯನ್ನಿಟ್ಟುಕೊಂಡು ಈ ಜಾಗತಿಕ ಹೂಡಿಕೆದಾರರ ಸಮ್ಮೇಳನವನ್ನು ದಲ್ಲಾಳಿ ಕೃಷ್ಣರ ಸರ್ಕಾರ ಯೋಜಿಸಿದೆ. ಜೂನ್ ಮೊದಲ ವಾರದಲ್ಲಿ ಬರುವ ಬಹುರಾಷ್ಟ್ರೀಯ ತಿಮಿಂಗಿಲಗಳು ಜೂನ್ ಎರಡನೇ ವಾರದಲ್ಲಿ ಆಯ್ದ ಜಾಗಗಳಿಗೆ ಭೇಟಿ ಕೊಡುತ್ತಾರೆ. ಸರ್ಕಾರ ಕೂಡಲೇ ಅಲ್ಲಿ ಅವರು ಕೇಳುವಷ್ಟು ಜಾಗವನ್ನು ಕೆ.ಐ.ಎ.ಡಿ.ಬಿ. ಮುಖಾಂತರ ರೈತರಿಂದ ವಶಪಡಿಸಿಕೊಳ್ಳಲು ಕ್ರಮ ಪ್ರಾರಂಭಿಸುತ್ತದೆ. ಕೊನೆಗೆ ಜೂನ್ ಕೊನೆಯ ವಾರದೊಳಗೆ ಅನುಮತಿ ಪತ್ರವನ್ನೂ ನೀಡಿ ಕಳಿಸಿಕೊಡುತ್ತಾರೆ. ಅಂದರೆ ಯಾವುದೇ ರೀತಿ ಪರಿಣಾಮಕಾರಿ ಆರ್ಥಿಕ-ಸಾಂಸ್ಕೃತಿಕ-ಸಾಮಾಜಿಕ-ಪರಿಸರ ಪರಿಣಾಮಗಳ ಅಧ್ಯಯನ ಮಾಡದೆ ಪರವಾನಗಿಯನ್ನು ನೀಡಲಾಗುತ್ತದೆ.

ಈಗಾಗಲೇ ಸರ್ಕಾರದ ಬೊಕ್ಕಸದಿಂದ 2.5 ಕೋಟಿ ನೀಡಿ ಆರ್ಥರ್ ಆಂಡರ್‌ಸನ್ ಎಂಬ ಬಹುರಾಷ್ಟ್ರೀಯ ಜಾಹೀರಾತು ಕಂಪೆನಿಯನ್ನು, ಈ ಬಹಿರಂಗ ಹರಾಜು ಮೇಳದ ಕುರಿತು ಪ್ರಚಾರ ಮಾಡಲೆಂದೇ ನಿಯೋಜಿಸಿಕೊಳ್ಳಲಾಗಿದೆ.

**ಇವರು ಮಾಡುವ ಉದ್ಧಾರವಾದರೂ ಯಾವ ಕ್ಷೇತ್ರಗಳಲ್ಲಿ?**

ಕುಡಿಯಲು ನೀರಿಲ್ಲದ, ಸೂರಿಲ್ಲದ, ವಿದ್ಯುತ್ ಕಾಣದ ಸಾವಿರಾರು ಹಳ್ಳಿಗಳು ಈ ನಾಡಿನಲ್ಲಿ ಇವೆ. ತಾನು ಬೆಳೆದುದಕ್ಕೆ ಬೆಲೆ ಇಲ್ಲದೆ ಸಾಲುಸಾಲಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸಾವಿರಾರು ಲೀಟರ್ ಹಾಲನ್ನು ಗಟಾರಕ್ಕೆ ಚೆಲ್ಲಬೇಕಾಗುತ್ತಿದೆ. ಕಳೆದ 10 ವರ್ಷಗಳಲ್ಲಿ 4 ಲಕ್ಷ ಸಣ್ಣ ಉದ್ದಿಮೆಗಳು ಮುಚ್ಚಿಕೊಂಡಿವೆ. ಲಕ್ಷಾಂತರ ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ, ಕೋಟ್ಯಾಂತರ ಯುವಜನರು ಉದ್ಯೋಗ ದೊರಕದೆ ಕಂಗಾಲಾಗಿದ್ದಾರೆ. ಈ ಮೇಳವು, ವಿದೇಶೀ ಬಂಡವಾಳವು ಮೇಲ್ಕಂಡ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುತ್ತದೆಯೇ? ಖಂಡಿತಾ ಇಲ್ಲ. ಈ ಬಂಡವಾಳವು ಬರುತ್ತಿರುವುದಾದರೂ ಯಾವ ಕ್ಷೇತ್ರಗಳಲ್ಲಿ? ಮಾಹಿತಿ ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ದೂರಸಂಪರ್ಕ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಸಿದ್ಧಉಡುಪು ರಫ್ತು, ಮೋಟಾರು ವಾಹನ ಮತ್ತು ಬಿಡಿ ಭಾಗಗಳು, ಚಿಕ್ಕ ವಿಮಾನ ನಿಲ್ದಾಣಗಳು, ಚಿಕ್ಕ ಬಂದರುಗಳು, ಔಷಧಿ, ಕೈಗಾರಿಕೆ, ಪ್ರವಾಸೋದ್ಯಮ, ಕೈಗಾರಿಕಾ ನಗರಗಳು/ಪಾರ್ಕ್‌ಗಳು, ವಿದ್ಯುತ್ ಉತ್ಪಾದನೆ ಮತ್ತು ವಿತರಣೆ, ಎಕ್ಸ್‌ಪ್ರೆಸ್ ಹೆದ್ದಾರಿಗಳು ಈ ಕ್ಷೇತ್ರಗಳಲ್ಲಿ ಸರ್ಕಾರವು ವಿದೇಶೀ ಬಂಡವಾಳವನ್ನು ಆಹ್ವಾನಿಸುತ್ತಿದೆ.

**ಜಾಗತಿಕ ಮೇಳವೆಂದರೆ ಉದ್ಯೋಗವೂ ಅಲ್ಲ! ಅಭಿವೃದ್ಧಿಯೂ ಅಲ್ಲ!**

ಈ ಕ್ಷೇತ್ರಗಳು ಅಪಾರ ಉದ್ಯೋಗಗಳನ್ನೇನೂ ಸೃಷ್ಟಿಸುವುದಿಲ್ಲ. ಬದಲಿಗೆ ಉದ್ಯೋಗಗಳನ್ನು ಕಡಿತಗೊಳಿಸುತ್ತವೆ ಎಂಬುದು ಕಳೆದ 10 ವರ್ಷಗಳ ಉದಾರೀಕರಣ ಪೂರ್ವ ದಶಕದಲ್ಲಿ ಈಗಾಗಲೇ ಕಂಡಿದ್ದೇವೆ. ಇವರ ಜೈವಿಕ ತಂತ್ರಜ್ಞಾನ ಬರುವುದು ರಾಷ್ಟ್ರೀಯ ಉದ್ಯಾನಗಳಲ್ಲಿ ಸಂಶೋಧನೆ ನಡೆಸುವುದರಿಂದ ಅಂದರೆ ಕುದುರೆಮುಖದಲ್ಲಾಗುತ್ತಿರುವಂತೆ ಅದಕ್ಕೆ ಸಾವಿರಾರು ಆದಿವಾಸಿಗಳ, ಎತ್ತಂಗಡಿಯಾಗುತ್ತದೆ. ಇವರ ಎಕ್ಸ್‌ಪ್ರೆಸ್ ಹೆದ್ದಾರಿ ಕೈಗಾರಿಕಾ ನಗರಗಳೆಂದರೆ ಬಿ.ಎಂ.ಐ.ಸಿ. ಯೋಜನೆಯಲ್ಲಾಗುತ್ತಿರುವಂತೆ ಲಕ್ಷಾಂತರ ರೈತರ ಬೀದಿಪಾಲು.

ಕೋಲಾರದಲ್ಲಿ ಅಂತರ್ಜಲ ಬತ್ತಿ ಹೋಗುತ್ತಿದ್ದರೆ ಅದಕ್ಕೆ ಪರಿಣಾಮಕಾರಿ ಪ್ರಯತ್ನಗಳನ್ನೇನೂ ಮಾಡದ ಸರ್ಕಾರವು ಈ ಮೇಳದ ಮುಖಾಂತರ ಆ ಜಿಲ್ಲೆಯ ಮಾಲೂರಿನಲ್ಲಿ ಪುಷ್ಪೋದ್ಯಮಕ್ಕಾಗಿ ವಿದೇಶೀ ಬಂಡವಾಳವನ್ನು ಆಹ್ವಾನಿಸುತ್ತಿದೆ. ಅದು ಅಂತರ್ಜಲವನ್ನು ಇನ್ನಷ್ಟು ಹೀರುತ್ತದೆ. ಅಂದರೆ ಇಲ್ಲಿನ ಸಮಸ್ಯೆಗಳನ್ನು ಕಡಿಮೆ ಮಾಡುವುದಕ್ಕಿಂತ ಇನ್ನಷ್ಟು ಹೆಚ್ಚು ಮಾಡುವುದೇ ಇಂತಹ ಮೇಳಗಳ ಉದ್ದೇಶವಾಗಿದೆ. ಜೊತೆಗೆ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಹೋಗುವವರು ಯಾರು? ವಿಮಾನ ನಿಲ್ದಾಣಗಳು ಯಾರಿಗಾಗಿ? ಮಾಹಿತಿ ತಂತ್ರಜ್ಞಾನ, ವಿದ್ಯುನ್ಮಾನ ತಂತ್ರಜ್ಞಾನದ ಫಲಾನುಭವಿಗಳು ಯಾರು?

ನಷ್ಟ ತೋರಿಸಿ ಖಾಸಗೀಕರಿಸಲಾಗುತ್ತಿರುವ ಹಲವಾರು ಸಾರ್ವಜನಿಕ ಉದ್ದಿಮೆಗಳಿಗೆ, ಬಿಡಿಗಾಸಿನ ನೆರವನ್ನೂ ನೀಡಲು ಹಿಂದೇಟು ಹಾಕುತ್ತಿರುವ ಸರ್ಕಾರಗಳು ಈ ಜಾಗತಿಕ ಮೇಳಕ್ಕೆ ಬರಲಿರುವ ಬರಾಕಂಗಳಿಗೆ ಅಪಾರ ಮೊತ್ತದ ತೆರಿಗೆ ವಿನಾಯ್ತಿಗಳನ್ನು ನೀಡುವುದಾಗಿ ತಿಳಿಸಿದೆ. ವಿನಾಯ್ತಿ, ಸಬ್ಸಿಡಿ ಮತ್ತು ಇನ್ನಿತರ ರಿಯಾಯ್ತಿಗಳನ್ನು ನೀಡಲಿಕ್ಕೆಂದ ಸರ್ಕಾರ ಹಲವಾರು ಕಾಯ್ದೆಗಳನ್ನೂ, ಕಾಯ್ದೆಗೆ ತಿದ್ದುಪಡಿಗಳನ್ನೂ ತಂದಿದೆ.

**ಜಾಗತಿಕ ಬಂಡವಾಳದಾರರ ಸಮ್ಮೇಳನವೆಂದರೆ ಮತ್ತಷ್ಟು ವಿದೇಶೀ ಬಂಡವಾಳ, ಮತ್ತಷ್ಟು ಸಣ್ಣ ಕೈಗಾರಿಕೆಗಳ ನಾಶ, ಮತ್ತಷ್ಟು ನಿರುದ್ಯೋಗ, ಮತ್ತಷ್ಟು ರೈತರ ಆತ್ಮಹತ್ಯೆ.** ಕಳೆದ ಕೆಲವಾರು ವರ್ಷಗಳಿಂದ ಸಾಮ್ರಾಜ್ಯಶಾಹಿ ವಿರೋಧಿ ಒಕ್ಕೂಟವು ಸಾಮ್ರಾಜ್ಯಶಾಹಿಯನ್ನು ಸರಿಯಾಗಿ ಅರ್ಥಮಾಡಿಕೊಂಡು ಅದನ್ನು ಜನರಿಗೆ ತಿಳಿಸುತ್ತಾ ವಿದೇಶೀ ಬರಾಕಂಗಳಿಗೆ ನಾಡನ್ನೂ ಮಾರುವ ಹುನ್ನಾರಗಳ ವಿರುದ್ಧ ಹೋರಾಡುತ್ತಾ ಬಂದಿದೆ. ಈ ಜಾಗತಿಕ ಹೂಡಿಕೆದಾರರ ಸಮ್ಮೇಳನದ ವಿರುದ್ಧ ಪ್ರತಿಭಟಿಸಲು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

○

"ಸಂಸ್ಕೃತಿಯ ಹೆಸರಿನಲ್ಲಿ ನಡೆಯುವ ಕೊಳಕು ಕೆಲಸಗಳನ್ನೆಲ್ಲ ಕಾಯ್ದುಕೊಂಡು ಹೋಗಲು ರಾಜಕಾರಣ, ಧರ್ಮ, ವ್ಯಾಪಾರ ಹಾಗೂ ಪ್ರಚಾರಗಳು ಸಂಚು ಮಾಡುತ್ತ ಇರುತ್ತವೆ. ಅಪಕೀರ್ತಿ ಹಾಗೂ ಸಾವು ಎರಡನ್ನೂ ತರಬಲ್ಲ ಭಯಾನಕ ಶಕ್ತಿ ಈ ಯಥಾಸ್ಥಿತಿವಾದಿ ಸಂಚುಗಳಿಗಿದೆ."

● *ರಾಮ್‌ಮನೋಹರ್ ಲೋಹಿಯ*

# ಜಾತ್ಯಾತೀತ ಇತಿಹಾಸದ ತಜ್ಞರ : ಮುಂದಿರುವ ಸವಾಲುಗಳು.

'ಅನೇಕ' - ಕೋಮುವಾದಿ ವಿರೋಧಿ ಒಕ್ಕೂಟವು ದಿನಾಂಕ 31-5-2000ದಂದು ಕಾನೂನು ಕಾಲೇಜಿನಲ್ಲಿ ಕೆ. ಎಂ. ಪಣಿಕ್ಕರ್ ಅವರ ಭಾಷಣದ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಪಣಿಕ್ಕರ್ ಅವರು ದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಇತಿಹಾಸದ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಜನಪರ ಹೋರಾಟಗಳನ್ನು ಬೆಂಬಲಿಸುವ ಅವರು ಇತಿಹಾಸವನ್ನು ವಸ್ತುನಿಷ್ಠವಾಗಿ, ಜಾತ್ಯಾತೀತ ಮನೋಭಾವನೆಯಿಂದ ಅಭ್ಯಸಿಸುವ ಇತಿಹಾಸ ತಜ್ಞರು. ಆ ದಿನದ ಸಭೆಯಲ್ಲಿ ಅವರು ಕೋಮುವಾದಿ ಮತ್ತು ಜಾತ್ಯಾತೀತ ಇತಿಹಾಸವನ್ನು ಅರ್ಥಮಾಡಿಕೊಳ್ಳುವ ಮತ್ತು ಜಾತ್ಯಾತೀತ ಇತಿಹಾಸ ತಜ್ಞರ ಮುಂದಿರುವ ಸವಾಲುಗಳನ್ನು ಕುರಿತು ಮಾತನಾಡಿದರು. ಅವರ ಭಾಷಣವನ್ನು ಸಂಕ್ಷಿಪ್ತವಾಗಿ ಇಲ್ಲಿ ವರದಿ ಮಾಡಿದ್ದೇವೆ.

ಸದ್ಯದ ಕೋಮುವಾದಿ ಪರಿಸ್ಥಿತಿಯಲ್ಲಿ ಇತಿಹಾಸಕಾರರು ಆತಂಕದಲ್ಲಿದ್ದಾರೆಂಬುದುದಕ್ಕಿಂತ ಇತಿಹಾಸ ಒಂದು ಶಿಸ್ತಾಗಿ ಆತಂಕವನ್ನೆದುರಿಸುತ್ತಿದೆ ಎನ್ನುವುದು ಸಮಂಜಸ. ನಮ್ಮ ದೇಶದಲ್ಲಿ ಬುಡಮಟ್ಟದಲ್ಲಿ ಕೋಮುವಾದಿಕರಣದ ಪ್ರಕ್ರಿಯೆ ಕೆಲಸ ಮಾಡುತ್ತಿದೆ. ಈ ಪರಿಸ್ಥಿತಿಯಲ್ಲಿ ಇತಿಹಾಸ ಒಂದು ಶಿಸ್ತಾಗಿ ಆತಂಕವನ್ನೆದುರಿಸುತ್ತಿದೆ. ಇತಿಹಾಸವನ್ನು ಸರಿಯಾದ ತಿಳುವಳಿಕೆಯಿಂದ ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಪ್ರತಿಯೊಂದು ಸಂಸ್ಕೃತಿಯು ಇತಿಹಾಸ ಪ್ರಜ್ಞೆಯನ್ನು ಮೂರು ಮುಖ್ಯ ರೀತಿಯಲ್ಲಿ ಪಡೆದುಕೊಂಡಿರುತ್ತದೆ.

1. **ಪರಂಪರಾಗತವಾಗಿ ಪಡೆದುಕೊಂಡ ಇತಿಹಾಸ** : ಕುಟುಂಬ ಮತ್ತು ಸುತ್ತಮುತ್ತಲಿನ ಸಾಮಾಜಿಕ ಪರಿಸರದಿಂದ ಪಡೆದುಕೊಳ್ಳುವ ಈ ಇತಿಹಾಸವು ತುಂಬಾ ಮುಖ್ಯ.

2. **ಅಕೆಡಮಿಕ್ ಇತಿಹಾಸ** : ಶಾಲೆ, ವಿಶ್ವವಿದ್ಯಾಲಯಗಳಲ್ಲಿ ಕಲಿಸುವ ಇತಿಹಾಸ. ಔಪಚಾರಿಕ ಸಂಶೋಧನೆ (Formal research)ಯನ್ನು ಒಳಗೊಂಡ ಈ ಇತಿಹಾಸವು ಅಷ್ಟೊಂದು ಮುಖ್ಯವಲ್ಲ. ಸಂಶೋಧನೆ ನಡೆಸಿ ಬರಹರೂಪದಲ್ಲಿ ಬರುವ ಹೊತ್ತಿಗೆ ಸಾಕಷ್ಟು ಸಮಯವಾಗಿರುತ್ತದೆ. ಪುಸ್ತಕಗಳನ್ನು 1000ಕ್ಕಿಂತ ಹೆಚ್ಚು ಅಚ್ಚು ಹಾಕಿಸುವುದಿಲ್ಲ. ಹಾಗಾಗಿ ಸಾಕಷ್ಟು ಜನರನ್ನು ತಲುಪುವುದೇ ಇಲ್ಲ.

3. **ಜನಪ್ರಿಯ ಇತಿಹಾಸ** : ರಾಜಕೀಯ ಗುಂಪುಗಳು ಹಾಗೂ ಇತರೆ ಗುಂಪುಗಳು ಹುಟ್ಟುಹಾಕುವ ಈ ಇತಿಹಾಸವನ್ನು ಒಂದು ರಾಜಕೀಯ ಅಸ್ತ್ರವನ್ನಾಗಿ ಬಳಸಿಕೊಳ್ಳಲಾಗುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಹಿಂದುತ್ವದ ಪ್ರತಿಪಾದಕರು ಈ ಇತಿಹಾಸವನ್ನು ಒಂದು ಅಸ್ತ್ರವಾಗಿ ಬಳಸಿಕೊಳ್ಳುತ್ತಿದ್ದಾರೆ.

ಒಂದು ಶಿಸ್ತಾಗಿರುವ ಇತಿಹಾಸ ಮತ್ತು ಜನಪ್ರಿಯ ಇತಿಹಾಸದ ನಡುವಿನ ಅಂತರವನ್ನು ಅರ್ಥ ಮಾಡಿಕೊಳ್ಳಬೇಕು. ಸಾಮಾನ್ಯ ಜನತೆಯ ಮೇಲೆ ಹೇರಲಾಗುತ್ತಿರುವ ಇತಿಹಾಸದ ಕಲ್ಪನೆಯನ್ನು ವಿರೋಧಿಸುವ ದಾರಿಗಳೇ ಇಲ್ಲದಂತಾಗಿದೆ. ನಾನೊಮ್ಮೆ ರೈಲಿನಲ್ಲಿ ಪ್ರಯಾಣಿಸುವಾಗ ಅಕಸ್ಮಾತ್ ರಾಮ ಜನ್ಮಭೂಮಿ ದೇವಾಲಯದ ಕಮಿಟಿಯ ಮುಖ್ಯಸ್ಥ ಸ್ವಾಮಿ ಅವೈದ್ಯನಾಥ್ ಅವರನ್ನು ಭೇಟಿ ಮಾಡಿದೆ. ಸುಮಾರು 2 ಗಂಟೆಗಳ ಕಾಲ ಭಾರತೀಯ ಇತಿಹಾಸವನ್ನು ಕುರಿತು ಆತ ನನ್ನೊಂದಿಗೆ ಮಾತನಾಡಿದ. ಇತಿಹಾಸವನ್ನು ಮಿಥ್ಯೆಗೊಳಿಸಿ ನನ್ನಂತಹವರಿಗೂ ಒಪ್ಪಿತವಾಗುವಂತೆ ಆತ ಮಾತನಾಡಬಲ್ಲರು. ಸಾಮಾನ್ಯರು ಪ್ರಶ್ನಿಸದೆ ಒಪ್ಪಿಕೊಂಡುಬಿಡಬಹುದು. ಕೊನೆಯಲ್ಲಿ ನಾನು ನನ್ನ ಪರಿಚಯವನ್ನು ಹೇಳಿದಾಗ ಅವರು ಗಲಿಬಿಲಿಗೊಂಡರು.

ಇತಿಹಾಸ ಮತ್ತು ದಂತಕತೆ (Myth)ಯೊಂದಿಗಿನ ಸಂಬಂಧವನ್ನು ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಇತಿಹಾಸದ ಅಂಶವಿಲ್ಲದಿರುವ ಯಾವ ದಂತಕತೆಯೂ ಇಲ್ಲ. ಈ ಮಿಥ್‌ಗಳಿಗೆ ವಿವರಣಾತ್ಮಕ, ಕಾನೂನು ಸಮ್ಮತವಾದ ಪಾತ್ರವಿದೆ. ಉದಾಹರಣೆಯಾಗಿ ಕೇರಳದಲ್ಲಿ ಪ್ರಚಲಿತವಿರುವ ಪರುಶರಾಮ ದಂತಕತೆ. ಪರುಶರಾಮ ಸಮುದ್ರದಲ್ಲಿ ಕೊಡಲಿಯನ್ನು ಎಸೆದಾಗ ಕೇರಳ ಹುಟ್ಟಿಕೊಂಡಿತು ಎಂಬ ದಂತಕತೆ ನಂಬೂದರಿ ಬ್ರಾಹ್ಮಣರ ಭೂಮಾಲೀಕತ್ವವನ್ನು ಅಧಿಕೃತಗೊಳಿಸುತ್ತದೆ.

ರಾಮ ಮಂದಿರದ ವಿವಾದವನ್ನು ವ್ಯವಸ್ಥಿತವಾಗಿ ಸೃಷ್ಟಿಸಲಾಯಿತು. ಮಂದಿರಕ್ಕೆ ಸಂಬಂಧಿಸಿದಂತೆ 1855 ಹಿಂದು-ಮುಸಲ್ಮಾನರ ನಡುವೆ ಘರ್ಷಣೆಯಾದದ್ದು ನಿಜ. ಅದು ಹನುಮಂತನ ದೇವಾಲಯಕ್ಕೆ ಸಂಬಂಧಿಸಿದಂತೆ ನಡೆದದ್ದು. ಈ ಘರ್ಷಣೆಯನ್ನೇ ಬಳಸಿಕೊಂಡು 77 ಯುದ್ಧಗಳ ಮಿಥ್ ಅನ್ನು ಸೃಷ್ಟಿಸಿ ರಾಮಮಂದಿರಕ್ಕೆ ಅನ್ವಯಿಸಿ ಅದನ್ನು ಮಂದಿರ ನಿರ್ಮಾಣವನ್ನು ಸಮರ್ಥಿಸಿಕೊಳ್ಳಲು ಬಳಸಿಕೊಂಡಿದ್ದಾರೆ. ಅಯೋಧ್ಯೆಯ ರಕ್ತರಾಮಜಿಯ ಇತಿಹಾಸದ ಹಿಂದೆ 77 ಕದನಗಳು ನಡೆದು ಒಮ್ಮೆ 120000 ಹಿಂದುಗಳು ನಂತರ 3 ಲಕ್ಷ ಹಿಂದುಗಳು ಪ್ರಾಣತೆತ್ತಿದ್ದಾರೆಂದು ಪ್ರಚಾರ ಮಾಡಲಾಯಿತು.

**ಅಕೆಡಮಿಕ್ ಇತಿಹಾಸಕ್ಕೆ ಆತಂಕವಾಗಿರುವ ಜನಪ್ರಿಯ ಇತಿಹಾಸ**

ಜನಪ್ರಿಯ ಇತಿಹಾಸವು ಉನ್ಮಾದತೆಯಿಂದ ಕೂಡಿದ್ದು ಅದನ್ನು ವ್ಯವಸ್ಥಿತವಾಗಿ ಜಾರಿಗೊಳಿಸುವ ಪ್ರಕಿಯೆಯನ್ನು ಭಾರತೀಯ ಇತಿಹಾಸ ಸಂಕಲನ ಸಮಿತಿಯು ಮಾಡುತ್ತಿವೆ. ಕಳೆದ 15 ವರ್ಷಗಳಿಂದ ಕೆಲಸ ಮಾಡುತ್ತಿರುವ ಈ ಸಮಿತಿಯು ಸ್ಥಳೀಯ ಇತಿಹಾಸವನ್ನು ಬುಡಮೇಲು ಮಾಡುವ ಉದ್ದೇಶ

ವನ್ನಿಟ್ಟುಕೊಂಡಿದೆ. ಅದಕ್ಕಾಗಿ ಜನರನ್ನು (ಇತಿಹಾಸಕಾರರಲ್ಲ) ನೇಮಿಸಿ ಅವರಿಗೆ ಹೇಗೆ ಕೆಲಸ ಮಾಡಬೇಕೆಂಬ ಮಾರ್ಗದರ್ಶಿಗಳನ್ನು ನೀಡುತ್ತದೆ. ಹಾಗೆ ನೇಮಕಗೊಂಡ ವ್ಯಕ್ತಿಯೊಬ್ಬ ಇತಿಹಾಸವನ್ನು ಹೇಗೆ ಬರೆಯಬೇಕೆಂದು ಕೇಳಿಕೊಂಡು ನನ್ನ ಬಳಿ ಬಂದಿದ್ದ. ಮಹಾರಾಷ್ಟ್ರದ ಜಿಲ್ಲೆಗಳ ಇತಿಹಾಸವನ್ನು ಬರೆಯುವ ಕೆಲಸವನ್ನು ಆತನಿಗೆ ವಹಿಸಲಾಗಿತ್ತು. ಕೋಮುವಾದಿ ನೆಲೆಯಲ್ಲಿ ಇತಿಹಾಸವನ್ನು ಆತ ಬರೆಯಬೇಕಿತ್ತು. ಅವರು ಇತಿಹಾಸಕಾರನೊಬ್ಬ ಗಮನದಲ್ಲಿಟ್ಟುಕೊಳ್ಳಬೇಕಾದ ಅಂಶಗಳು, ನಿಯಮಗಳ ಅಗತ್ಯವನ್ನು ಪರಿಗಣಿಸುವುದೇ ಇಲ್ಲ. **ಜನಪ್ರಿಯ ಇತಿಹಾಸವನ್ನು ಕೋಮುವಾದಿಗೊಳಿಸಿದ ಹಂತ ಮುಗಿದು ಈಗ ಅಕೆಡಮಿಕ್ ಇತಿಹಾಸವನ್ನು ಕೋಮುವಾದಿಗೊಳಿಸುವ ಹಂತವು ಬಂದಿದೆ.**

ಪರಂಪರಾಗತ ಮತ್ತು ಸ್ಥಳೀಯ ಇತಿಹಾಸಗಳನ್ನು ಮುಚ್ಚಿ ಹಾಕಲಾಗುತ್ತಿದೆ. ಯಾಕೆಂದರೆ ಹೆಚ್ಚಿನಂಶ ಈ ಇತಿಹಾಸಗಳು ಜಾತ್ಯತೀತ ಗುಣವನ್ನು ಹೊಂದಿರುವುದರಿಂದ. ಮೂಲತಃ ಇವು ನೆರೆ ಹೊರೆಯವರ ಆಚಾರ ವಿಚಾರಗಳನ್ನು ಅರ್ಥೈಸಿಕೊಂಡಿರುತ್ತವೆ. ಒಬ್ಬರನ್ನೊಬ್ಬರು ಗೌರವಿಸುವ ಪರಂಪರಾಗತ ಪ್ರಜ್ಞೆಯನ್ನು ಒಳಗೊಂಡಿರುತ್ತವೆ.

ಭಾರತದಲ್ಲಿರುವ ಫ್ಯಾಸಿಸಂ ಹಿಂದುತ್ವವಾದಿ ರೂಪ ಪಡೆದುಕೊಳ್ಳುತ್ತಿದೆ. ಜನಪ್ರಿಯ ಇತಿಹಾಸವನ್ನು ದಾಖಲು ಮಾಡಿ, ಒಪ್ಪಿತಗೊಳಿಸಲಾಗುತ್ತಿದೆ. ರಾಜಾಸ್ತಾನದಲ್ಲಿ ಪ್ರತಿಯೊಂದು ಪಠ್ಯ ಪುಸ್ತಕದಲ್ಲಿ ಹಿಂದು ಮಹಾಸಭಾದ ನಾಯಕರನ್ನೊಳಗೊಂಡ ಅಧ್ಯಾಯಗಳಿವೆ. ಹಿಂದು ಕೋಮುವಾದಿಗಳನ್ನು ಬ್ರಿಟಿಷರಿಂದ ಸ್ವಾತಂತ್ರ್ಯ ಗಳಿಸಿಕೊಟ್ಟ ರಾಷ್ಟ್ರೀಯ ನಾಯಕರುಗಳೆಂದು ಚಿತ್ರಿಸಲಾಗುತ್ತಿದೆ. ಭಾರತದ ಮೇಲಿನ ಆಕ್ರಮಣಕಾರರಲ್ಲಿ ಬ್ರಿಟಿಷರು ಕೊನೆಯವರಾಗಿದ್ದು, ಭಾರತದ ಪಾವಿತ್ರತೆಯನ್ನು ಕಾಪಾಡಲು ಹಿಂದುಗಳು ಅವರ ವಿರುದ್ಧ ಹೋರಾಡಿದರೆಂದು ವಿವರಿಸಲಾಗಿದೆ. ಇತಿಹಾಸದ ಬಗ್ಗೆ ಭಯವಿರುವುದರಿಂದ ಇತಿಹಾಸವನ್ನು ತಿರುಚುತ್ತಿದ್ದಾರೆ.

**ಇತಿಹಾಸವನ್ನು ವಿರೂಪಗೊಳಿಸುವುದು ಇತಿಹಾಸವನ್ನೆ ನಿರಾಕರಿಸಿದಂತೆ.** ಈಗ ಕೋಮುವಾದವು ಹಿಂದು-ಮುಸ್ಲಿಂ ಗಲಭೆಯನ್ನು ದಾಟಿ ವಿಸ್ತಾರಗೊಂಡಿದೆ. ಹಿಂದುತ್ವವು ಫ್ಯಾಸಿಸಂ ರೂಪ ಪಡೆದುಕೊಂಡಿದೆ. ಆರ್ಯರು ಈ ದೇಶದ ಮೂಲ ನಿವಾಸಿಗಳೆಂದು ಸಾಬೀತು ಪಡಿಸುವ ಮೂಲಕ, ಆದಿವಾಸಿಗಳ ಕಾಲನಿಗೆ ಹೋಗಿ ಅಲ್ಲಿ ಕಿಚಡಿ ತಯಾರಿಸಿ ಅವರೊಟ್ಟಿಗೆ ಕುಳಿತು ಊಟ ಮಾಡುವ ಮೂಲಕ ದೇಶದ ದಲಿತರನ್ನು ಹಿಂದುತ್ವದ ಕೈಯೊಳಗೆ ತರುವ ಹುನ್ನಾರವನ್ನು ಮಾಡಲಾಗುತ್ತಿದೆ.

ಇನ್ನೊಂದು ಹಂತದಲ್ಲಿ ICHR (Indian council for Hisocrical Research) ನಂತಹ ಸಂಸ್ಥೆಗಳನ್ನು ಕೇಸರಿಕರಣಗೊಳಿಸುವ ಕಾರ್ಯವನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಬ್ರಿಟಿಷರು ಭಾರತದ ಸ್ವತಂತ್ರ ಸಂಗ್ರಾಮ ಕುರಿತು ಹೊರತಂದ ಪುಸ್ತಕದಲ್ಲಿ ಭಾರತಕ್ಕೆ ಸ್ವಾತಂತ್ರ್ಯವನ್ನು ನಾವೇ ನೀಡಿದರೆಂದು ಉಲ್ಲೇಖಿಸಿದ್ದರು. ಆ ಸಂದರ್ಭದಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವನ್ನು ಮರು ಅವಲೋಕಿಸಿ ವಸ್ತುನಿಷ್ಠವಾಗಿ ಬರೆಯುವ ಅಗತ್ಯವನ್ನು ಮನಗಾಣಲಾಯಿತು. ಆಗ ಭಾರತದ ಕೆಲವು ಇತಿಹಾಸತಜ್ಞರನ್ನು ಸೇರಿಸಿ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು. ಒಂದು ಯೋಜನೆಯನ್ನು ಕಾರ್ಯಗತಗೊಳಿಸಲು ನನ್ನನ್ನು ನೇಮಿಸಲಾಯಿತು. ಯೋಜನೆಯ ಕಾರ್ಯ ಸಂಪೂರ್ಣಗೊಂಡು ಅದನ್ನು ಪ್ರಕಟಣೆಗೆಂದು ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್‌ನವರಿಗೆ ನೀಡಲಾಗಿತ್ತು. ಮುರಳಿ ಮನೋಹರ್ ಜೋಶಿಯವರು ಮಾನವ ಸಂಪನ್ಮೂಲ ಖಾತೆಗೆ ಮಂತ್ರಿಯಾದ ಕೂಡಲೇ ICHRನ ಸಿಬ್ಬಂದಿಗಳನ್ನು ಬದಲಾಯಿಸಿ ಇತಿಹಾಸ ಅಧ್ಯಯನದ ಯಾವ ಅನುಭವವಿಲ್ಲದ, ಕೇವಲ ಕರಸೇವೆಯ ಅನುಭವವಿದ್ದಂತಹವರನ್ನು ಸಂಸ್ಥೆಯ ಮುಖ್ಯಸ್ಥರನ್ನಾಗಿ ಮಾಡಿದರು. ಮುದ್ರಣ ಪೂರ್ಣಗೊಂಡು ಹೊರಬರುವ ಮೊದಲೇ ಮಾನವ ಸಂಪನ್ಮೂಲ ಮಂತ್ರಿಗಳು ICHRನ ಮುಖ್ಯಸ್ಥರ ಮೂಲಕ ಪುಸ್ತಕವನ್ನು ಹೊರತರಬಾರದೆಂದು ಪ್ರೆಸ್‌ನವರಿಗೆ ನೋಟಿಸು ನೀಡಿಸಿದರು. ಹಾಗಾಗಿ ನನ್ನ ನೇತೃತ್ವದಲ್ಲಿ ತಂದ ಇತಿಹಾಸದ ಸಂಪುಟಗಳು ಹೊರಬಂದಿಲ್ಲ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹಿಂದು ಮಹಾಸಭಾವು ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಭಾಗವಾಗಿರಲಿಲ್ಲ ಎಂಬುದನ್ನು ಹಿಂದೂ ಮಹಾಸಭಾದ ನಾಯಕರುಗಳು ಬರೆದಿರುವ ಪತ್ರಗಳ ಆಧಾರದ ಮೇಲೆ ವಸ್ತುನಿಷ್ಠವಾಗಿ ಬರೆದಿರುವುದೇ ತಡೆಹಿಡಿಯಲು ಕಾರಣವಾಗಿದೆ. ಪುಸ್ತಕ ಪ್ರಕಟಣೆಯನ್ನು ತಡೆಹಿಡಿದಿರುವುದಕ್ಕೆ ಸುಳ್ಳು ಹೇಳಿಕೆಗಳನ್ನು ನೀಡಲಾಯಿತು. ಅರುಣ್‌ಶೌರಿಯವರು ನಿಯತ ಕಾಲಿಕವೊಂದರಲ್ಲಿ ಯೋಜನೆಯಡಿಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಲಾಗಿದೆಯೆಂದು ಬರೆದಿದ್ದರು. ಆದರೆ ಆ ಯೋಜನೆಯಿಂದ ನನಗೆ ಬರಬೇಕಾಗಿದ್ದ ಹಣ ಇನ್ನು ಬಂದಿಲ್ಲ. ಇಡೀ ಯೋಜನೆಯ ಖರ್ಚು ವೆಚ್ಚವನ್ನು ವಿವರವಾಗ ಬರೆದು ವಿವರಣೆಯನ್ನು ಕೇಳಿದಾಗ ಅರುಣ್‌ಶೌರಿ ಮೌನವಾಗಿಬಿಟ್ಟರು.

**ಅಕೆಡಮಿಕ್ ಇತಿಹಾಸದಲ್ಲಿ ಸಂಶೋಧನೆಗಳು ನಡೆದು ಪುಸ್ತಕಗಳು ಹೊರಬರುವ ವೇಳೆಗೆ ಸಾಕಷ್ಟು ಸಮಯವಾಗಿರುತ್ತದೆ. ಅಲ್ಲದೆ ಅದು ಎಲ್ಲರಿಗೂ ತಲುಪುವುದಿಲ್ಲ, ಅದಕ್ಕಿಂತ ಜನರ ಬಳಿಗೆ ಹೋಗಿ ಇತಿಹಾಸ ಕುರಿತು ಮಾತನಾಡುವುದು, ಚರ್ಚಿಸುವುದು ಹೆಚ್ಚು ಪರಿಣಾಮಕಾರಿ. ಸಕ್ಯೂಲರ್ ಗುಣ ಹೊಂದಿರುವ ಪರಂಪರಾಗತ ಸ್ಥಳೀಯ ಇತಿಹಾಸವನ್ನು ದಾಖಲಿಸುವುದು ತುಂಬಾ ಮುಖ್ಯ, ಅದು ಕೋಮುವಾದಿ ಇತಿಹಾಸಕ್ಕೆ ಉತ್ತರವಾಗುತ್ತದೆ.**

ವರದಿ : ***ಸರಸ್ವತಿ, ಕಮಾನ್, ಮಣಿ***

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

**ವಾರ್ಷಿಕ ಚಂದಾ : 40 ರೂ.**

**ಸಂಸ್ಥೆಗಳಿಗೆ : 100 ರೂ.**

*ಸಂ. ಮಂಡಳಿ*

REGD No. CPMG/KA/BGE/289/2000

BOOK-POST
PRINTED MATTER

ವಿಳಾಸ :
**ಮಾನಸ**
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067